Funding: Tattva Heritage Foundation,Kolkata. Digitization: eGangotri.

ಆಚಾರ್ಯ ವಿನೋಬಾ ಭಾವೆ

ಅವರ

ಭೂದಾನ ಯಜ್ಞ ಚಳವಳಿ

★

ಅಖಿಲ ಭಾರತ ಸರ್ವ ಸೇವಾಸಂಘದ ಪ್ರಕಟಣೆಯ ಅನುವಾದ

ಭಾಗ ೧

ಪ್ರಕಾಶಕರು ಮತ್ತು ಸಂಚಾಲಕರು

ಥಕ್ಕರ್ ಬಾಪಾ ಕನ್ಯಾ ವಿದ್ಯಾಲಯ

ಆನಂದ ಆಶ್ರಮ :: ಬೆಂಗಳೂರು

★

ಬೆಲೆ ೦—೪—೦

ಅಥವಾ

ಒಂದು ಲಡಿ ನೂಲು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆಚಾರ್ಯ ವಿನೋಬಾ ಭಾವೆ

ಅವರ

ಭೂದಾನ ಯಜ್ಞ ಚಳವಳಿ

ಅಖಿಲ ಭಾರತ ಸರ್ವ ಸೇವಾಸಂಘದ ಪ್ರಕಟಣೆಯ ಅನುವಾದ

ಭಾಗ ೧

ಪ್ರಕಾಶಕರು ಮತ್ತು ಸಂಚಾಲಕರು

ಥಕ್ಕರ್ ಬಾಪಾ ಕನ್ಯಾ ವಿದ್ಯಾಲಯ

ಆನಂದ ಆಶ್ರಮ :: ಬೆಂಗಳೂರು

ಬೆಲೆ ೦—೪—೦

ಅಥವಾ

ಒಂದು ಲಡಿ ನೂಲು

ಪುಸ್ತಕ ದೊರೆಯುವ ಸ್ಥಳ:

ಮೈಸೂರು ಪ್ರಾಂತೀಯ ಭೂದಾನ ಯಜ್ಞ ಸಮಿತಿ

ನಂ. ೨೪೨, ೫ನೇ ಮೇನ್ ರಸ್ತೆ

ಗಾಂಧೀನಗರ :: ಬೆಂಗಳೂರು ೨೨.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪ್ರಕಾಶಕರ ಬಿನ್ನಹ

ಅಖಿಲ ಭಾರತ ಸರ್ವ ಸೇವಾ ಸಂಘದವರು ಪ್ರಕಟಿಸಿರುವ "ಸೊಸೈಟಿಕಾ ಭೂದಾಯಜ್ಞ ಆಂದೋಲನ್"ದ ಕನ್ನಡ ರೂಪ ಇದು. ನಾವು ಎರಡು ಭಾಗಗಳಲ್ಲಿ ಇದನ್ನು ಪ್ರಕಟಿಸಿದ್ದೇವೆ. ಇದು ಮೊದಲನೆಯ ಭಾಗ. ಅನುವಾದಕರಾದ ಶ್ರೀ ಖಾದ್ರಿ ಶಾಮಣ್ಣ ನವರಿಗೂ ಮತ್ತು ಶ್ರೀ ಟಿ. ಎಸ್. ಅನಂತರಂಗಾಚಾರ್ಯರಿಗೂ ವಂದನೆಗಳು.

ಭೂದಾನ ಯಜ್ಞವು ಕರ್ನಾಟಕದಲ್ಲಿ ಹರಡಲು ಇದರಿಂದ ಸಹಾಯಕವಾದೀತೆಂದು ನಂಬಿಕೆ.

ಬೆಂಗಳೂರು
ತಾ॥ ೧೬-೧೧-೫೩

—ಪ್ರಕಾಶಕರು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮೊದಲ ಮಾತು

ವಿನೋಬಾಜೀಯವರ ಭೂದಾನಯಜ್ಞವು ಇಂದು ಇಡೀ ಭಾರತದಲ್ಲಿ ವ್ಯಾಪಕವಾಗುತ್ತಿದೆ. ಇದನ್ನು ಮತ್ತಷ್ಟು ಹರಡುವ ಅವಶ್ಯಕತೆ ನಮ್ಮೆಲ್ಲರ ರಚನಾತ್ಮಕ ಕಾರ್ಯಕರ್ತರಿಗೂ ಮತ್ತು ಸಂಘಗಳಿಗೂ ತೋರಿದೆ. ಈ ಸಂಬಂಧದಲ್ಲಿ ಸರ್ವಸೇವಾಸಂಘವೂ ಒಂದು ಸಂಕಲ್ಪವನ್ನು ಮಾಡಿದೆ. ಈ ಪುಸ್ತಕದ ಎರಡನೆಯ ಭಾಗದಲ್ಲಿ ಅದನ್ನು ಕೊಡಲಾಗಿದೆ. ಭೂದಾನಯಜ್ಞ ಹೇಗೆ ಹುಟ್ಟಿತು, ಅದರ ಸ್ವರೂಪವೇನು, ಅದರ ಅವಶ್ಯಕತೆ ಮತ್ತು ಮಹತ್ವ ಮುಂತಾದ ವಿಚಾರಗಳ ಬಗ್ಗೆ ಅಧಿಕೃತವಾದ ಮತ್ತು ಸಂಗ್ರಹವಾದ ಚಿಕ್ಕ ಪೊತ್ತಿಗೆ ಇದುವರೆಗೆ ಜನರ ಮುಂದೆ ಇರಲಿಲ್ಲ. ಅಂತಲೇ ಈ ಪುಸ್ತಕವನ್ನು ಈ ದೃಷ್ಟಿಯಿಂದ ಸಜ್ಜುಗೊಳಿಸಲಾಗಿದೆ. ಕಾರ್ಯಕರ್ತರಿಗೂ ಕೂಡ ಇದು ಪ್ರೇರಣೆಯನ್ನೂ, ಮಾರ್ಗದರ್ಶನವನ್ನೂ ನೀಡೀತೆಂದು ಆಸೆ.

ದೇಶದ ಜನತೆ ಈ ಆಂದೋಲನದಲ್ಲಿ ಪೂರ್ಣವಾದ ಸಹಕಾರ ಕೊಡುತ್ತದೆಂದು ನಂಬಿಕೆ.

ಆ. ಭಾ. ಸರ್ವಸೇವಾಸಂಘ,
ವರ್ಧಾ, ತಾ॥ ೨೨-೦೨-೧೯೫೨

—ಶಂಕರರಾವ್ ದೇವ್
ಮಂತ್ರಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಿ ಷ ಯ

ಕ್ರಮ		ಪುಟ
೧.	ಹುಟ್ಟು, ವಿಕಾಸ ಮತ್ತು ಸ್ರೋತ	೧
೨.	ಮೂಲಭೂತ ವಿಚಾರಧಾರೆ ಮತ್ತು ವಿಸ್ತರಣೆ	೧೩

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹುಟ್ಟು, ವಿಕಾಸ ಮತ್ತು ಸ್ರೋತ

ಭಾರತದ ಹೊಣೆ

ಭೂದಾನ ಯಜ್ಞದ ರೂಪದಲ್ಲಿ ಅಹಿಂಸಕ ಕ್ರಾಂತಿಯ ಈ ಹೊಸ ವಿಧಾನ, "ಪ್ರಜಾಸೂಯಯಜ್ಞ"* ಈಗ ಮೆಲ್ಲಮೆಲ್ಲನೆ ತನ್ನ ಸಹಜ ವೇಗಕ್ಕೆ ಬರಹತ್ತಿದೆ. ತೆಲಂಗಾಣದಲ್ಲಿ ಹುಟ್ಟಿದ ಈ ಗಂಗೋತ್ರೀ ಈಗ ಇಡೀ ಭಾರತದಲ್ಲೇ ಗಂಗೆಯ ವಿಶಾಲಪಾತ್ರದ ರೂಪದಲ್ಲಿ ಹುಟ್ಟುತ್ತ ನಡೆದಿದೆ. ತೆಲಂಗಾಣದಲ್ಲಿ ಅದಕ್ಕೆ ಬೇರೊಂದು ಮಹತ್ವ ಇತ್ತು. ಒಂದು ವಿಶಿಷ್ಟ ಪರಿಮಿತಿ ಇತ್ತು; ಆದರೆ ಅಖಿಲ ಭಾರತದ ಕ್ಷೇತ್ರದಲ್ಲಿ ಅಷ್ಟೇ ಯಶಸ್ವಿಯಾಗಿ ಸದ್ಯದ ಸ್ಫೋಟಕ ಪರಿಸ್ಥಿತಿಯ ಪರಿಹಾರಕ್ಕೆ ಶಾಂತಿಮಯ ಉಪಾಯವನ್ನು ನೀಡಿರುವ ಕಾರಣದಿಂದ ಅದರ ಯಶಸ್ಸು ಹಾಗೂ ವ್ಯಾಪಕತೆ ಇಡೀ ದೇಶದ ಗಮನವನ್ನು ತನ್ನತ್ತ ಸೆಳೆದುಕೊಂಡಿದೆ ಮತ್ತು ಒಂದು ತೀವ್ರ ಸಮಸ್ಯೆಯ ಶಾಂತಿಮಯ ಪರಿಹಾರ ಎಂದು ಭಾವಿಸಿ ಅದರ ಬಗ್ಗೆ ಗಂಭೀರವಾಗಿ ಆಲೋಚಿಸುವುದಕ್ಕೂ ಆರಂಭವಾಗಿದೆ. ಭೂದಾನಗಳ ರೂಪದಲ್ಲಿ ಈ ಆಂದೋಳನಕ್ಕೆ ಸಿಕ್ಕಿರುವ ಸಫಲತೆ ಸ್ಥೂಲವಾದುದು ಮಾತ್ರ, ಆದರೂ ಅದೇನೂ ಕಡಿಮೆ ಮಹತ್ವದ್ದಲ್ಲ. ಅದರ ಮೂಲಕ ವಾತಾವರಣದ ಬದಲಾವಣೆ ಹಾಗೂ ಈ ಸಮಸ್ಯೆಯ ಗಂಭೀರ ಸ್ವರೂಪ ಇವುಗಳ ಬಗ್ಗೆ ದೇಶದಲ್ಲಿ ಉಂಟಾಗುತ್ತಿರುವ ಭಾವನೆ ಒಂದು ಯುಗಾಂತರಕಾರೀ ಘಟನೆಯಾಗಿದೆ. ಇದು ಪ್ರಚಲಿತ ಮಾರ್ಗಗಳ ಹಾಗೂ ವಿಧಾನಗಳ ಕೇವಲ ನಿಷೇಧ, ನಕಾರಾತ್ಮಕ ಸ್ವರೂಪವಲ್ಲ, ಅದರ ಬದಲು ವಿರುದ್ಧ ಸನ್ನಿವೇಶದಲ್ಲೂ ಸಹ ಯಶಸ್ವಿಯಾಗಿ ಆಗುಗೊಳಿಸಲ್ಪಡುತ್ತಿರುವ ಪ್ರತ್ಯಕ್ಷ ಪರಿಹಾರ

---

* "ಮಹಾ ಭಾರತದಲ್ಲಿ ರಾಜಸೂಯ ಯಾಗದ ವರ್ಣನೆ ಇದೆ ಮತ್ತು ಇದು ನನ್ನ "ಪ್ರಜಾಸೂಯಯಜ್ಞ" ಆಗಿದೆ. ಇದರಲ್ಲಿ ಪ್ರಜೆಗೆ ಪಟ್ಟಾಭಿಷೇಕ ಆಗುವುದು. ಕಾರ್ಮಿಕ, ರೈತ, ಭಂಗಿಯಾದಿಯಾಗಿ ಎಲ್ಲರೂ ನಮಗಾಗಿ ಸ್ವಲ್ಪ ಆಗಿದೆ ಅಂದು ಕೊಳ್ಳುವ ರಾಜ್ಯ ಇದಾದೀತು. ಅಂಥ ಸಮಾಜದ ಹೆಸರು ಸರ್ವೋದಯ. ಅದರಿಂದ ಸ್ಫೂರ್ತಿ ಪಡೆದು ನಾನು ತಿರುಗುತ್ತಿದ್ದೇನೆ. —ವಿನೋಬಾ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಾಗಿದೆ. ಇದರ ಅಗತ್ಯ ಇಷ್ಟು ತೀವ್ರವಾಗಿರುವುದರಿಂದಲೇ ವಿನೋಬಾಜೀ ಹೇಳುತ್ತಾರೆ, "ನಮ್ಮ ಸಮಾಜರಚನೆಯಲ್ಲಿ ತತ್‌ಕ್ಷಣ ಪರಿವರ್ತನೆ ಆಗದಿದ್ದಲ್ಲಿ ನಾವು ನಾಶವಾಗಿ ಹೋದೇವು. ಬೇರೆ ದೇಶಗಳು ಭೂಸಮಸ್ಯೆಯನ್ನು ಪರಿಹರಿಸಿದ ಮಾರ್ಗಗಳು ನಮಗೆ ಇಷ್ಟವಿಲ್ಲ. ರಷ್ಯ ಹಾಗೂ ಅಮೆರಿಕಗಳ ನಡುವಣ ಸ್ಪರ್ಧೆಯಿಂದ ಜಗತ್ತಿನ ಇತರ ರಾಷ್ಟ್ರಗಳು ನಾಶವಾಗುತ್ತಿರುವಾಗ ಜಗತ್ತಿಗೆ ತಿಳಿವಿನ ದಾರಿಯನ್ನು ತೋರಬಲ್ಲ ರಾಷ್ಟ್ರವೆಂದರೆ ಭಾರತವೊಂದೇ. ಪ್ರಪಂಚದ ಮುಖ್ಯ ಸಮಸ್ಯೆಗಳನ್ನು ಶಾಂತಿಯ ದಾರಿಯಲ್ಲಿ ಬಿಡಿಸುವ ವಿಧಾನವನ್ನು ಭಾರತ ಮಾತ್ರ ತೋರಿಸೀತು." ಆದರೆ, "ಭಾರತ ಇಂದು ಸಾಮಾಜಿಕ ಅಸಂತೋಷ ಹಾಗೂ ಆರ್ಥಿಕ ವಿಷಮತೆಯ ಸುಳಿಯಲ್ಲಿ ಸಿಕ್ಕಿಬಿದ್ದಿದೆ. ಇದರಿಂದ ಸರಿಯಾದ ಹಾದಿಯಲ್ಲಿ ಬಿಡುಗಡೆ ಹೊಂದುವುದಕ್ಕಾಗಿಯೇ ಈ ಭೂದಾನಯಜ್ಞದ ಆಂದೋಳನ, ಇದು ಭಾರತದ ಪ್ರಕೃತಿಗೂ ಅನುಕೂಲವಾಗಿಯೇ ಇದೆ."

ಆದರೆ ನಾವು ಇಲ್ಲಿ ಈ ಕೆಲಸದ ಐತಿಹಾಸಿಕ ಬೆಲೆ ಅಳೆಯುವುದು ಬೇಕಿಲ್ಲ, ಅದು ಭವಿಷ್ಯದ ಇತಿಹಾಸಕಾರರ ಕೆಲಸ. ಈ ಕೆಲಸ ಈಗತಾನೇ ಆರಂಭವಾಗಿದೆ ಮತ್ತು ಅದರ ಕೆಲವು ಮುಖ ಮಾತ್ರ ಗೋಚರವಾಗಿದೆ.

ಆದಕಾರಣ ಅದರ ಪ್ರಾರಂಭಿಕ ಇತಿಹಾಸ ಹಾಗೂ ಸ್ವರೂಪವನ್ನು ಅರಿಯುವ ಪ್ರಯತ್ನವನ್ನು ಮಾತ್ರ ಇಲ್ಲಿ ಮಾಡಿದರೆ ಸಾಕು.

ತೆಲಂಗಾಣಯಾತ್ರೆ

ವಾಸ್ತವಿಕವಾಗಿ ಈ ಯಜ್ಞದ ಆರಂಭ ಪೀಡಿತ ಜನತೆಯ ಸತತ ಸಾಕ್ಷಿಯೂ, ಇಂದಿನ ಕಾಲದಲ್ಲಿ ಪರಿಣಾಮಕಾರಿಯೆಂಬ ಭಾವಿಸಲ್ಪಟ್ಟ ಚಿಕಿತ್ಸೆ ಸಾಕಷ್ಟು ಪ್ರಮಾಣದಲ್ಲಿ ನಡೆದಂಥದೂ ಆದ ಪ್ರದೇಶದಲ್ಲಿ ಆಯಿತು. ತೆಲಂಗಾಣದ ಭಯಾನಕ ಸ್ಥಿತಿಯನ್ನು ಕಂಡು ವಿನೋಬಾಜೀಯ ಸಂತವಾಣಿ ಸಹಿತ ಈ ಮಾತು ಹೇಳದೆ ಉಳಿಯಲಿಲ್ಲ : "....ಅಹಿಂಸೆಯಲ್ಲಿ ನನ್ನ ಅಚಲ ಶ್ರದ್ಧೆ ಇದ್ದ ಕಾರಣದಿಂದಲೇ ನಾನು ಅಲ್ಲಿ ನನ್ನ ಕೆಲಸಮಾಡುತ್ತಲಿದ್ದೆ. ಇಲ್ಲದಿದ್ದಲ್ಲಿ ನಾನೂ ಕಮ್ಯೂನಿಸ್ಟರೊಡನೆ ಸೇರಿಬಿಡುತ್ತಿದ್ದೆನೆಂದು ಕಾಣಿಸುತ್ತದೆ, ಅಂಥದಿತ್ತು ಅಲ್ಲಿನ ಪರಿಸ್ಥಿತಿ." ಮತ್ತು ಇಂಥ ಪರಿಸ್ಥಿತಿಯನ್ನು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಿರಾಕರಿಸುವ ಅನೇಕ ಉಪಾಯಗಳನ್ನು ಕಮ್ಯೂನಿಸ್ಟರೂ, ಸರಕಾರವೂ ತಮ್ಮ ತಮ್ಮ ರೀತಿಯಲ್ಲಿ ಅನುಸರಿಸಿದ್ದರು; ಆದರೆ ಉರಿಯುವ ಕೆಂಡದಂತೆ ಅಲ್ಲಿನ ಪರಿಸ್ಥಿತಿ ತನ್ನಷ್ಟಕ್ಕೆ ತಾನೇ ಧಗಧಗಿಸುತ್ತಿತ್ತು. ಆಗ ಆ ಸಮಸ್ಯೆಗೆ ಶಾಂತಿಮಾರ್ಗದಿಂದ ಪರಿಹಾರ ಹುಡುಕುವ ದೃಷ್ಟಿಯಿಂದ ವಿನೋಬಾಜೀ ಅಲ್ಲಿಗೆ ತೆರಳಿದರು ಅವರ ಮುಂದೆ ಇದ್ದ ಮುಖ್ಯ ಕಲ್ಪನೆ, ಅವರೇ ಹೇಳಿರುವಂತೆ, ಈ ಬಗೆಯಾಗಿತ್ತು.

ಅಹಿಂಸಕ ಪರಿಹಾರ ಶೋಧನೆಯಲ್ಲಿ

".....ನಮ್ಮ ಸಾಮಾಜಿಕ ಹಾಗೂ ವ್ಯಕ್ತಿಗತವಾದ ಎಲ್ಲ ಬಗೆಯ ಕಷ್ಟಗಳ ಪರಿಹಾರವೂ ಅಹಿಂಸೆಯಿಂದ ಹೇಗೆ ಆದೀತು, ಇದನ್ನು ನಾನು ಹುಡುಕಬೇಕು. ಇದು ನನ್ನ ಮುಖ್ಯ ಕೆಲಸ ಮತ್ತು ಅದಕ್ಕಾಗಿಯೇ ತೆಲಂಗಾಣಕ್ಕೆ ನಾ ತೆರಳಿದೆ. ಅದಕ್ಕಾಗಿ ಶಾಂತಿಸೇನೆಯೊಂದನ್ನು ಸಜ್ಜುಗೊಳಿಸುವ ಬಗ್ಗೆ ಮನಸ್ಸು ಮಾಡಿದ್ದ ನನ್ನ ನಿಶ್ಚಯವನ್ನು ಕೃತಿಗೊಳಿಸುವ ಸಂದರ್ಭ ನನಗೆ ದೊರಕಿತು. ಒಬ್ಬ ಶಾಂತಿಸೈನಿಕನಂತೆ ನಾ ಅಲ್ಲಿಗೆ ಹೋಗಿದ್ದೆ. ಈ ಕೆಲಸವನ್ನು ನಾನು ಕೈ ಬಿಟ್ಟದ್ದ ಪಕ್ಷದಲ್ಲಿ ಶಾಂತಿಸೇನೆಯ ಬಗ್ಗೆ ನಾ ತಳೆದಿದ್ದ ಪಣವನ್ನೇ ಮುರಿದಂತೆ ಆಗುತ್ತಿತ್ತು," ಹೀಗೆ ಒಬ್ಬ ಶಾಂತಿಸೈನಿಕನಂತೆ ಅವರು ಅಲ್ಲಿಗೆ ಹೋಗಿದ್ದರು.

ಒಂದು ಗಂಭೀರ ಸೂಚನೆ

ತೆಲಂಗಾಣಾಯಾತ್ರೆಯ ಅವರ ಆಲೋಚನೆ ರ್ಗಳ್ ರಲ್ಲೇ ಅವರು ಜಾತಿವಾದೀ ದಳ್ಳುರಿಯ ಶಮನಕ್ಕಾಗಿ ಕೈಗೊಂಡ ಹೈದ್ರಾಬಾದ್ ಪ್ರವಾಸದ ಕಾಲದಲ್ಲೇ ಇತ್ತು. ಆದರೆ ಆಗ ಆ ಯೋಗ ಒದಗಿಬರಲಿಲ್ಲ, ಅವರು ಯಾರೊಡನೆಯೂ ವಿಶೇಷವಾಗಿ ಆ ವಿಷಯ ಪ್ರಸ್ತಾಪಿಸಲಿಲ್ಲ, ಕೇವಲ ಚರ್ಚೆಯಲ್ಲೇ ಆ ಮಾತು ಉಳಿದು ಹೋಯಿತು. ಈ ಸಲವೂ ಹೈದರಾಬಾದಿನ ಸರ್ವೋದಯ ಸಮ್ಮೇಳನಕ್ಕಾಗಿ ಕಾಲ್ನಡಿಗೆ ಯಾತ್ರೆ ಹೊರಡುವ ಸಮಯದಲ್ಲಿ ವರ್ಧಾದ ಲಕ್ಷ್ಮೀನಾರಾಯಣ ಮಂದಿರದಲ್ಲಿ ಸೇರಿದ್ದ ಬೀಳ್ಕೊಡುಗೆಯ ಸಭೆಯಲ್ಲಿ ಅವರು ಸೂಚಿಸಿದ್ದರು—"....ಇದು ನಮ್ಮ ಕೊನೆಯ ಸಮಾಗಮವೇ ಏನೋ" ಎಂದು ಆಗಲೂ ಅವರ ಈ ನಿಶ್ಚಯದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಲ್ಪನೆ ಯಾರಿಗೂ ಬರಲಿಲ್ಲ. ಶಿವರಾಮಪಲ್ಲಿಯ ಸರ್ವೋದಯ ಸಮ್ಮೇಳನ ಮುಗಿದೂ ಮುಗಿಯದಂತಿರುವಾಗಲೇ ೧೯೫೧ ರ ಏಪ್ರೆಲ್ ೧೫ ರಂದು ಅವರು ತಮ್ಮ ತೆಲಂಗಾಣಾಯಾತ್ರೆಯ ಮಾತನ್ನು ಹೈದರಾಬಾದಿನಲ್ಲಿ ಬಹಿರಂಗವಾಗಿ ಪ್ರಕಟಿಸಿದರು. ೧೫ ನೇ ತಾರೀಖು ರಾಮನವಮಿ ಯಾಗಿತ್ತು. ಹೈದರಾಬಾದಿನ ಜೇಲಿನಲ್ಲಿ ಕಮ್ಯೂನಿಸ್ಟ್ ಬಂಧಿಗಳೊಡನೆ ಅಂದು ಎರಡು ಘಂಟೆಕಾಲ ಮಾತುಕತೆ ನಡೆಸಿದ್ದರು. ಸಂಜೆ ಪ್ರಾರ್ಥನಾ ಸಭೆಯಲ್ಲಿ ಹೀಗೆ ನುಡಿದರು.

ತೆರೆದ ಹೃದಯದಿಂದ ಪ್ರವೇಶ

"ನಾನು ಸರ್ವೋದಯ ಸಮಾಜದ ಸೇವಕನೆಂದು ನೀವು ಬಲ್ಲಿರಿ. ಸರ್ವೋದಯದ ಹೆಸರು ನನ್ನ ಪಾಲಿಗೆ ಭಗವಂತನ ಹೆಸರು. ಸರ್ವೋದಯದಲ್ಲಿ ಎಲ್ಲರ ಬಗ್ಗೆಯೂ ಚಿಂತೆ ಉಂಟು, ಆದಕಾರಣ ಕಮ್ಯೂನಿಸ್ಟ್ ಸೋದರರೂ ನನ್ನ ಆಲೋಚನೆಗೆ ವಿಷಯವಾಗಿದ್ದಾರೆ. ದೇವರ ಇಚ್ಛೆ ಇದ್ದಂತೆ ಎಲ್ಲ ಆದೀತು. ಯಾವ ಬಗೆಯ ಅಹಂಕಾರವನ್ನೂ ನಾವು ನಮ್ಮ ಬಳಿ ಇಟ್ಟುಕೊಳ್ಳತಕ್ಕದ್ದಲ್ಲ. ಆದರೆ ನಮ್ಮ ಕರ್ತವ್ಯವೂ ಹಲವು ಇವೆ. ಪ್ರತಿಯೊಬ್ಬರ ಹತ್ತಿರವೂ ಆತ್ಮೀಯ ಪರಿಚಯ ಮಾಡಿಕೊಳ್ಳುವುದು, ಪ್ರತಿಯೊಬ್ಬರೊಡನೆಯೂ ಏಕರೂಪನಾಗಲು ಯತ್ನಿಸುವುದನ್ನು ನನ್ನ ಕರ್ತವ್ಯವೆಂದು ಭಾವಿಸುತ್ತೇನೆ. ಪ್ರತಿಯೊಬ್ಬರ ಕಡೆಯೂ ಅವರು ತಮ್ಮ ಕಡೆ ನೋಡಿಕೊಳ್ಳುವಂಥ ದೃಷ್ಟಿಯಿಂದ ನಾನು ನೋಡಬೇಕೆಂದು ಎಣಿಸುತ್ತೆನೆ. ನನ್ನ ದೃಷ್ಟಿಯಿಂದ ಬೇರೆಯವರನ್ನು ನೋಡುವುದು ನೋಡದೇ ಇದ್ದಂತೆಯೇ ಎಂದು ನನ್ನ ನಂಬಿಕೆ. ಆಯಾ ಮನುಷ್ಯನಿಗೆ ಇರುವ ತನಗಾಗಿ ಇರುವ ದೃಷ್ಟಿಯನ್ನೇ ಕಂಡುಕೊಂಡು ಅದರೊಡನೆ ಒಂದಾಗಿ ಯೋಚಿಸುವ ದೃಷ್ಟಿಯೇ ನಿಜವಾದ ದೃಷ್ಟಿ."

ಭೂದಾನದ ಗಂಗೋತ್ರಿ

ಈ ಬಗೆಯಾಗಿ ತೆರೆದ ಹೃದಯದಿಂದ, ಕಮ್ಯೂನಿಸ್ಟರ ಬಗ್ಗೆಯೂ ಸಮಭಾವ ಇಟ್ಟುಕೊಂಡು ಅವರು ೧೬ ನೆಯ ತಾರೀಖಿನಂದು ದಂಡ ಕಾರಣ್ಯ ಪ್ರವೇಶಿಸಿದರು. ಕೇವಲ ಮೂರು ದಿನಗಳ ಒಳಗೆ ೧೯೫೧ ರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಏಪ್ರಿಲ್ ೧೮ ರಂದು ಹೈದರಾಬಾದಿನಿಂದ ೩೪ ಮೈಲಿ ದೂರದಲ್ಲಿರುವ ನಲಗೊಂಡಾ ಜಿಲ್ಲೆಯ ಪೋಚಂಪಲ್ಲಿ ಗ್ರಾಮದಲ್ಲಿ ಈ ಭೂದಾನಯಜ್ಞದ ಗಂಗೋತ್ರಿಯ ಉಗಮವಾಯಿತು. ಅದು ಅತ್ಯಂತ ಸಹಜವಾದ ಆರಂಭ. ಎಲ್ಲ ಜನರೂ ತಮ್ಮ ಹಿಂದಿನ ಬಿಡಾರದಿಂದ ಬೆಳಿಗ್ಗೆ ೫ ಘಂಟೆಗೆ ಸರಿಯಾಗಿ ಹೊರಟು ಸುಮಾರು ೭॥ ಘಂಟೆಗೆ ಅಲ್ಲಿಗೆ ಸೇರಿದರು. ರಾಮಧುನ್ ದೊಂದಿಗೆ ಹಳ್ಳಿಗರೆಲ್ಲ ವಿನೋಬಾಜೀಗೆ ಪ್ರೇಮಪುರಸ್ಸರ ಸ್ವಾಗತ ನೀಡಿದರು. ಇಡೀ ಹಳ್ಳಿಯೇ ರಂಗವಲ್ಲಿಯಿಂದ ಸಜ್ಜಾಗಿತ್ತು. ನಿವಾಸದ್ವಾರದಲ್ಲಿಯೇ ವಿನೋಬಾಜೀಗೆ ಶ್ರೀಫಲದ ಕಾಣಿಕೆ ಇತ್ತರು, ಪುರುಷಸೂಕ್ತದ ಪಠನ ಆಯಿತು. ಗ್ರಾಮಪ್ರದಕ್ಷಿಣೆ ಹಾಗೂ ಹರಿಜನರ ವಸತಿಯ ವೀಕ್ಷಣೆ ಆದ ಬಳಿಕ ಮಧ್ಯಾಹ್ನ ಹರಿಜನ ವಸತಿಯ ಜನ ಎಲ್ಲರೂ ವಿನೋಬಾಜೀಯ ಬಳಿಗೆ ಬಂದು ತಮ್ಮ ನೋವು ನಂಜನ್ನೆಲ್ಲ ಅವರಲ್ಲಿ ತೋಡಿಕೊಂಡರು. ಶಿಕ್ಷಣದ ಅವ್ಯವಸ್ಥೆ, ಮನೆಗಳ ಅಭಾವಗಳ ಜತೆಯಲ್ಲಿ, "ಪೂರಾ ಕೆಲಸವೂ ಇಲ್ಲ, ಜಮೀನೂ ಇಲ್ಲ! ಹೊಟ್ಟೆ ತುಂಬೀತು ಹೇಗೆ?" ಎಂದೂ ಅವರ ಮೊರೆ ಇತ್ತು. ಜಮೀನಿಗಾಗಿ ಅವರ ಹಸಿವು ತೀವ್ರತೆಯಿಂದ ಪ್ರಕಟ ವಾಗುತ್ತಿತ್ತು. ವಿನೋಬಾರ ಮನಸ್ಸಿನಲ್ಲಿಯಾದರೋ ಸಾಧ್ಯವಿದ್ದರೆ ಸರಕಾರದಿಂದ ಇದರ ವ್ಯವಸ್ಥೆ ಮಾಡಿಸೋಣವೆಂಬ ಭಾವನೆ ಇತ್ತು. ಒಟ್ಟು ಜಮೀನು ೫೫೦೦ ಎಕರೆ, ಜನಸಂಖ್ಯೆ ಮೂರು ಸಾವಿರ-ಇದು ಹಳ್ಳಿಯ ಸ್ಥಿತಿ, ಅಂದರೆ ಪ್ರತಿ ಮನುಷ್ಯನಿಗೆ ೩ ಎಕರೆಗಿಂತ ಸ್ವಲ್ಪ ಜಮೀನು ಬರುತ್ತಿತ್ತು. ಈ ಹರಿಜನರು ಜಮೀನುದಾರರ ಬಳಿ ಕೂಲಿ ಮಾಡುವವರು, ವರ್ಷದ ಆದ್ಯಂತ ಬಂದ ಬೆಳೆಯಲ್ಲಿ ೨೦ ನೆಯ ಒಂದು ಭಾಗ ಹಾಗೂ ಕಂಬಳಿ ಇತ್ಯಾದಿ ಕೆಲ ಸಾಮಾನು ಅವರಿಗೆ ದೊರಕುತ್ತದೆ.

ವಿನೋಬಾ ಅವರ ಜಮೀನಿನ ಬೇಡಿಕೆ ಕಂಡು ಪ್ರಶ್ನಿಸಿದರು "ಎಷ್ಟು ಜಮೀನು ಬೇಕು?" ಅವರ ಮುಖ್ಯಸ್ಥ ತಮ್ಮ ತಮ್ಮಲ್ಲೇ ಚರ್ಚೆ ನಡೆಸಿ ಉತ್ತರ ಹೇಳಿದರು "೭೦ ಎಕರೆ. ಖುಷ್ಕಿ ೪೦, ತರಿ ೪೦" ವಿನೋಬಾ ಮತ್ತೆ ಕೇಳಿದರು, "ಇಷ್ಟರಲ್ಲಿ ನಿಮ್ಮ ಕೆಲಸ ಸಾಗಿತೇನು?" ಆತ ಹೇಳಿದರು "ಹೌದು, ನಾವು ಮತ್ತೇನಾದರೂ ಕೆಲಸ ನೋಡಿಕೊಳ್ಳುತ್ತೇವೆ"

ಆಗ ವಿನೋಬಾ ತಿಳಿಸಿದರು, "ನಿಮಗೆ ಜಮೀನು ಕೊಡಿಸಿದರೆ ನೀವು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಎಲ್ಲರೂ ಕೂಡಿ ಬೇಸಾಯ ಮಾಡುವಿರೋ ಅಥವಾ ಬೇರೆ ಬೇರೆ ಮಾಡುವಿರೋ ?" "ಎಲ್ಲರೂ ಕೂಡಿಯೇ" ಎಂದು ಉತ್ತರ ಬಂತು. ವಿನೋಬಾ ಹೇಳಿಬಿಟ್ಟರು, "ಒಂದು ಅರ್ಜಿ ಕೊಡಿ, ನಾವು ಪ್ರಯತ್ನ ಮಾಡುತ್ತೇವೆ."

ಹಳ್ಳಿಯ ನಿವಾಸಿಗಳೂ ಅಲ್ಲಿ ಇದ್ದರು. ವಿನೋಬಾ ಅವರನ್ನೂ ಸಹಜವಾಗಿ ಕೇಳಿದರು, "ಸರಕಾರದಿಂದ ಜಮೀನು ಸಿಗದಿದ್ದರೆ ಅಥವಾ ಅದರಲ್ಲಿ ತಡ ಆದರೆ ಹಳ್ಳಿಗರೇ ಸ್ವಲ್ಪ ಜಮೀನು ಕೊಡಬಲ್ಲರೇ ?" ಹಾಜರಿದ್ದವರಲ್ಲಿ ಒಬ್ಬ ಸೋದರ ಶ್ರೀ. ರಾಮಚಂದ್ರರೆಡ್ಡಿ ಹೇಳಿದರು, "ನನ್ನ ದಿವಂಗತ ತಂದೆಯವರ ಜಮೀನಿನಲ್ಲಿ ಸ್ವಲ್ಪವನ್ನು ಈ ಸೋದರರಿಗೆ ಕೊಡೋಣ. ನಾನು ನನ್ನ ಪರವಾಗಿ ಮತ್ತು ನನ್ನ ಐವರು ಸೋದರರ ಪರವಾಗಿ ನೂರು ಎಕರೆ - ೫೦ ಎಕರೆ ಖುಷ್ಕಿ ಮತ್ತು ೫೦ ಎಕರೆ ತರಿ ಜಮೀನನ್ನು ನಿಮ್ಮ ಮೂಲಕ ಇವರಿಗೆ ಕಾಣಿಕೆಯಾಗಿ ನೀಡುತ್ತೇನೆ."

ದರಿದ್ರನಾರಾಯಣನಿಗಾಗಿ

ಈ ಬಗೆಯಾಗಿ ಭೂದಾನದ ಈ ಆಸ್ತಿಭಾರ ಅಲ್ಲಿ ಬಿತ್ತು. ದೇವರೇ ಆ ಸೋದರನ ಬಾಯಿಂದ ಈ ಸಂಕಲ್ಪ ಮಾಡಿಸಿ ಭೂದಾನದ ಗಂಗೋತ್ರಿಯ ನಿರ್ಮಾಣ ಮಾಡಿದನೆನ್ನಬಹುದು. ಇದರ ಸಂಬಂಧದಲ್ಲಿ ವಿನೋಬಾ ಈ ರೀತಿ ಹೇಳಿದರು. "ಸಮಸ್ಯೆಯ ಪರಿಹಾರವೂ ಅಲ್ಲಿಯೇ ಹೊಳೆದೀತೆಂದು ಅಂದಾಜು ಸಹ ಮೊದಲಿಂದ ನನ್ನಲ್ಲಿ ಇರಲಿಲ್ಲ. ಆದರೆ ಪ್ರವಾಸದಲ್ಲಿ ಬೇಗನೆ ಜಮೀನಿನ ಪ್ರಶ್ನೆ ನನ್ನ ಮುಂದೆ ಬಂತು. ಜನ ನನ್ನಿಂದ ಜಮೀನು ಬಯಸಿದರು ಮತ್ತು ಅವರಿಗಾಗಿ ನನಗೆ ಜಮೀನೂ ಸಿಕ್ಕಿತು. ಆಗಾಗ ಜಮೀನು ಬೇಡುವುದು ಮತ್ತು ಸಹಜವಾಗಿ ಅದು ಸಿಕ್ಕಿಬಿಡುವುದು ಈವರೆಗೆ ಯಾವಾಗಲೂ ನಡೆದಿಲ್ಲ. ಮಂದಿರ ಹಾಗೂ ಮಠಗಳು ಮತ್ತು ಅಂಥ ಸಂಸ್ಥೆಗಳಿಗೆ ಸ್ವಲ್ಪ ಜಮೀನು ಸಿಕ್ಕಿರುವ ಉದಾಹರಣೆಗಳು ಕೆಲವು ಸಿಕ್ಕುತ್ತವೆ, ಆದರೆ ಭೂಮಿಹೀನರಿಗಾಗಿ ಭೂಮಿ ಸಿಕ್ಕುವುದು ಪೂರಾ ಹೊಸದೇ. ಮನುಷ್ಯ ಹಣ ಕೊಟ್ಟಾನು, ಆದರೆ ಜಮೀನು ಕೊಡುವುದೆಂದರೆ ತನ್ನ ಆಸ್ತಿಯ ಪಾಲನ್ನು ಕೊಟ್ಟಂತೆ, ಇಷ್ಟು ಕಠಿಣ ಈ ಕೆಲಸ. ಮಹಾಭಾರತದ ದೃಷ್ಟಾಂತ ನಿಮಗೆ ಗೊತ್ತು. ಪಾಂಡವರು ಐದು ಗ್ರಾಮ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾತ್ರ ಕೇಳಿದರು, ಆದರೆ ದುರ್ಯೋಧನ ಸೂಜಿ ಮೊನೆಯಷ್ಟು ಜಾಗವನ್ನು ಕೊಡಲು ನಿರಾಕರಿಸಿದ. ಈ ಪ್ರಶ್ನೆ ಇಷ್ಟು ಕಠಿಣ. ಅಲ್ಲದೆ ಈಚಿನ ದಿನಗಳಲ್ಲಿ ಜಮೀನಿನ ಬೆಲೆಯೂ ಏರುತ್ತಿದೆ; ಹೇಗೆ ಹೇಗೆ ಬೆಲೆ ಏರುತ್ತಿದೆಯೋ ಹಾಗೆಲ್ಲ ಜಮೀನಿಗಾಗಿ ಜನರ ದುರಾಶೆಯೂ ಹೆಚ್ಚುತ್ತಿದೆ, ಮನುಷ್ಯ ಸ್ವಭಾವವಂತೂ ಇನ್ನೂ ಬೆಳೆಯುತ್ತಿದೆ. ಇಂಥ ಸ್ಥಿತಿಯಲ್ಲಿ ಜಮೀನು ಬೇಡುವುದು, ಅದು ದೊರೆಯುವುದು ಸುಲಭ ಕೆಲಸವಲ್ಲ!

"ಆದರೆ ನಾನು ಅತ್ಯಂತ ವಿನಯಪೂರ್ವಕವಾಗಿ, ಅತ್ಯಂತ ಪ್ರೇಮ ಪೂರ್ವಕವಾಗಿ ಜಮೀನು ಬೇಡಲು ಮೊದಲು ಮಾಡಿದೆ. ನಾನು ಎಷ್ಟು ವಿನಯಪೂರ್ವಕವಾಗಿ ಹಾಗೂ ಭಕ್ತಿಪೂರ್ವಕವಾಗಿ ಕೆಲಸಮಾಡಿದೆನೋ ಹೇಳಲಾರೆ, ಆದರೆ ಎರಡು ತಿಂಗಳ ಅವಧಿಯಲ್ಲೇ ೧೨ ಸಾವಿರ ಎಕರೆ ಭೂಮಿ ದರಿದ್ರನಾರಾಯಣನಿಗಾಗಿ ದೊರಕಿಬಿಟ್ಟಿತು."

ಕಮ್ಯೂನಿಸ್ಟರ ಪ್ರಶ್ನೆಯ ಪರಿಹಾರ

ಅದೇದಿನದ ಸಂಜೆಯ ಸಭೆಯಲ್ಲಿ ವಿನೋಬಾಜೀ ಆ ಭೂದಾನದ ಘೋಷಣೆ ಮಾಡುತ್ತಾ ಹೇಳಿದರು: "ಒಂದು ಪಕ್ಷ ಈ ಸೋದರರು (ದಾನಿಗಳು) ತಮ್ಮ ಮಾತನ್ನು ಪಾಲಿಸದಿದ್ದಲ್ಲಿ ದೇವರಿಗೆ ಅಪರಾಧಿಗಳಾಗುತ್ತಾರೆ. ಅವರು ಜಮೀನು ಕೊಟ್ಟಲ್ಲಿ ನಿಮ್ಮ (ಹರಿಜನರ) ಮೇಲೆ ಒಂದು ಹೊಣೆ ಬೀಳುತ್ತದೆ. ನೀವೆಲ್ಲರೂ ಪ್ರೇಮ ಭಾವದಿಂದ ಇದ್ದು ಜಮೀನನ್ನು ಸಾಮುದಾಯಿಕವಾಗಿ ಮತ್ತು ಜೆನ್ನಾಗಿ ವ್ಯವಸಾಯ ಮಾಡಬೇಕು. ಎಲ್ಲ ಹಳ್ಳಿಗಳಲ್ಲೂ ಇಂಥ ಸಜ್ಜನರು ದೊರಕಿಬಿಟ್ಟಲ್ಲಿ ಕಮ್ಯೂನಿಸ್ಟರ ಪ್ರಶ್ನೆಯೇ ಪರಿಹಾರವಾಗಿ ಬಿಡುತ್ತದೆ." ಏಕೆಂದರೆ ೨-೩ ದಿನಗಳಲ್ಲೇ ಅವರು ಅಲ್ಲಿನ ಪರಿಸ್ಥಿತಿಯ ಪ್ರತ್ಯಕ್ಷ ಅನುಭವ ಪಡೆಯಲಾರಂಭಿಸಿಬಿಟ್ಟಿದ್ದರು.

ಆಧುನಿಕ ವಾಮನಾವತಾರದ ಜನ್ಮ

ಈ ಬಗೆಯಾಗಿ ದಾನದ ಈ ಗಂಗೋತ್ರೀ ವೇಗದಿಂದ ಮುಂದೆ ಸಾಗುತ್ತಾ ಬಂತು, ವಿನೋಬಾಜೀ ಈ ಅಂಶವನ್ನು ಗ್ರಹಿಸಿದರು. ಮುಂದೆ ಸಾಗಿದಂತೆಲ್ಲ ಅದರ ವಿಭಿನ್ನರೂಪಗಳನ್ನು ಕುರಿತು ಆಲೋಚಿಸಹತ್ತಿದರು, ಆ ಬಗ್ಗೆ ಮಾತಾಡಹತ್ತಿದರು ಹಾಗೂ ಅದಕ್ಕೊಂದು ಸ್ವರೂಪ ನೀಡುತ್ತ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಡೆದರು. ಅದೇ ಸಮಯದಲ್ಲಿ ತೆಲುಗು ಮಹಾಕವಿ ಪೋತನನ ಊರಾದ, ಹೈದರಾಬಾದಿನಿಂದ ೬೪ ಮೈಲಿ ದೂರದಲ್ಲಿರುವ ವಾವಿಳಾಪಲ್ಲಿ ಗ್ರಾಮದಲ್ಲಿ ೨೧-೪-೫೧ ರಂದು ಬಲಿ ಹಾಗೂ ವಾಮನರ ಪ್ರಸಿದ್ಧ ಪೌರಾಣಿಕ ಪ್ರಸಂಗ ಅವರ ಹೃದಯದಲ್ಲಿ ಅಂಕುರಿಸಿತು. ತಮ್ಮನ್ನು ವಾಮನಾವ ತಾರದ ರೂಪದಲ್ಲಿ ವರ್ಣಿಸಿದರು. "ಕಮ್ಯುನಿಸ್ಟರ ಕೆಲಸದ ಹಿಂಬದಿಯಲ್ಲಿನ ವಿಚಾರ ಸರಣಿಯಸಾರಾಂಶವನ್ನು ಗ್ರಹಿಸಿ ಅದನ್ನು ಕೃತಿಗೊಳಿಸುವ ದೃಷ್ಟಿಯನ್ನು ಆಲೋಚಿಸುತ್ತಲೇ" ಅವರಿಗೆ ಈ ವಾಮನಾವತಾರ ಸೂಚನೆ ಹೊಳೆದಿದ್ದು. ಅವರು ಹೇಳಿದರು "ನಾನಂತೂ ಬ್ರಾಹ್ಮಣನೇ, ವಾಮನಾವ ತಾರವನ್ನು ಧರಿಸಿ ಭೂಮಿದಾನ ಬೇಡುತ್ತ ನಡೆದೆ. ಮೊದಮೊದಲು ಇದರ ಪರಿಣಾಮ ವಾತಾವರಣದ ಮೇಲೆ ಎಂತಾದೀತೊ ಎಂದು ಅನಿಸುತ್ತಿತ್ತು. ಹಲವಾರು ಅಮೃತ ಬಿಂದುಗಳಿಂದ ಇಡೀ ಸಮುದ್ರ ಸಿಹಿ ಹೇಗೆ ತಾನೇ ಆದೀತು? ಆದರೆ ಸ್ವಲ್ಪ ಸ್ವಲ್ಪವಾಗಿ ವಿಚಾರ ಬೆಳೆಯುತ್ತ ಸಾಗಿತು. ಪರಮಾತ್ಮನನ್ನ ಮಾತುಗಳಲ್ಲಿ ಸ್ವಲ್ಪ ಶಕ್ತಿ ತುಂಬಿದ. ಈ ಕೆಲಸ ಕ್ರಾಂತಿ ಕಾರೀ ಕೆಲಸವೆಂದು ಜನ ಅರಿತರು, ಸರಕಾರದ ಶಕ್ತಿಯಿಂದ ದೂರಾದ ದ್ದೆಂದೂ ಅವರು ತಿಳಿದರು." ಏಕೆಂದರೆ, "ಅಲ್ಲಿ ಶಾಂತಿ ಪಾಲನೆಮಾಡುವ ಸಲುವಾಗಿ ಸರಕಾರ ಕಳುಹಿಸಿದ್ದ ಮಿಲಿಟರಿ ಪಡೆಗಾಗಿ ವರ್ಷಕ್ಕೆ ೫ ಕೋಟಿ ರೂಪಾಯಿ ವೆಚ್ಚವಾಗುತ್ತಿತ್ತು, ಆದರೆ ಇಂಥ ಪ್ರಶ್ನೆ ಮಿಲಿಟರಿಯಿಂದ ಪರಿಹಾರ ಆಗದು. ಸಿಂಹಗಳ ಷಿಕಾರಿಯ ಕೆಲಸ ಬೇಕಿದ್ದರೆ ಮಿಲಿಟರಿ ಮಾಡೀತು, ಆದರೆ ಎಲ್ಲಿ ವಿಚಾರ ಸರಣಿಯನ್ನೆದುರಿಸಬೇಕು ಅಲ್ಲಿ ವಿಚಾರ ಸರಣಿಯಿಂದಲೇ ಆ ಕೆಲಸ ಸಾಧ್ಯ."

ಕಮ್ಯುನಿಸ್ಟರ ಗೆಲುವಿನ ಗುಟ್ಟೆಲ್ಲಿ?

ಸರಕಾರ ತನ್ನ ಪೂರಾ ಮಿಲಿಟರಿ ಶಕ್ತಿಯನ್ನೂ, ಹಣವನ್ನೂ ಉಪ ಯೋಗಿಸಿದ್ದರೂ ಸಹ ತೆಲಂಗಾಣದಲ್ಲಿ ಕಮ್ಯುನಿಸ್ಟರನ್ನು ಸದೆ ಬಡಿಯುವಲ್ಲಿ ಸಫಲವಾಗಿರಲಿಲ್ಲ. ಅಲ್ಲಿನ ಜನತೆಯ ಸ್ಥಿತಿ ಹೇಗಿತ್ತೆಂದರೆ ದಿವಸದಲ್ಲಿ ಬೆಳಕಿರುವಾಗೆಲ್ಲ ಪೋಲೀಸರ ಭಯ, ರಾತ್ರಿಯೆಲ್ಲ ಕಮ್ಯುನಿಸ್ಟರ ಭೀತಿ-ಈ ರೀತಿಯ ಚಕ್ರಕ್ಕೆ ಅವರು ಬಲಿಯಾಗಿದ್ದರು; ಜತೆಗೆ ಬಡತನ, ಉಪವಾಸ-

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಈ ವಿಪತ್ತುಗಳ ಹೊಡೆತ, ಇದರಿಂದಾಗಿ ಭಯ ಅವರ ಜೀನ್ನಷ್ಟಿತ್ತು. ಅಲ್ಲದೆ ಕಾಂಗ್ರೆಸ್ಸಿಗರದಾಗಲಿ, ಸಮಾಜವಾದಿಗಳದಾಗಲಿ, ರಚನಾತ್ಮಕ ಕಾರ್ಯ ಕರ್ತರದಾಗಲಿ ಸೇವೆ ಸಿಕ್ಕಿರಲಿಲ್ಲ, ಅವರಿಗೆ ಲಭಿಸಿದ್ದು ಕೇವಲ 'ರಾತ್ರಿಯ ರಾಜರ' ಕಮ್ಯುನಿಸ್ಟರ ಬೆಂಬಲ, ಅದೂ ಮಾಲಿಕರ ಕೊಲೆ ಮಾಡಿ, ಕೊಳ್ಳೆಯಮಾರ್ಗದಿಂದ ಲಭಿಸಿದ ಜಮೀನು. ಕೆಲವು ಹಳ್ಳಿಗಳಲ್ಲಂತೂ ಹೊರಗಿನ ಸೇವಕರ ಪ್ರವೇಶ ಸಹ ಆಗಿರಲಿಲ್ಲ, ಒಂದು ಕಡೆಯಿಂದ ಸರಕಾರ ಮತ್ತೊಂದು ದಿಕ್ಕಿನಿಂದ ಕಮ್ಯುನಿಸ್ಟರು ದಾರಿ ತೋರುವುದರ ಜೊತೆಗೆ ಆಹುತಿಯನ್ನು ತೆಗೆದುಕೊಳ್ಳುತ್ತಿದ್ದರು. ಅಲ್ಲಿನ ಈ ಸ್ಫೋಟಕ ಪರಿಸ್ಥಿತಿಯನ್ನು ವಿನೋಬಾ ಬೇಗ ಗ್ರಹಿಸಿ, ಅದರ ಚಿಕಿತ್ಸೆಯನ್ನು ಆರಂಭಿಸಿದರು. ಆ ಸಮಸ್ಯೆಯ ತಿರುಳನ್ನು ಅವರು ತಿಳಿದುಬಿಟ್ಟಿದ್ದರು. ಈ ಬಗ್ಗೆ ಅವರು ಇಂತು ಹೇಳಿದ್ದಾರೆ: **"ತೆಲಂಗಾಣದಲ್ಲಿ ಕಮ್ಯುನಿಸ್ಟರಿಗೆ ಲಭಿಸಿರುವ ಯಶಸ್ಸಿನ ಮೂಲಕಾರಣಗಳನ್ನು ಶೋಧಿಸಿದ ಬಳಿಕ ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ: ಈ ಯುಗದ ಮುಖ್ಯ ಸಮಸ್ಯೆ ಭೂಮಿಯಸಮಸ್ಯೆಯೇ.** ತೆಲಂಗಾಣದಲ್ಲಿ ಇಂದು ಉದ್ಭವಿಸಿದ ಸಮಸ್ಯೆ ನಾಳೆ ಇಡೀ ಭಾರತದಲ್ಲೇ ತಲೆ ಎತ್ತದೆ ಇರಲಾರದು. ಅದನ್ನು ನಾವೆಲ್ಲರೂ ಎದುರಿಸಲೇ ಬೇಕಾದೀತು, ಅಂತಲೇ ಇದರ ಅಹಿಂಸಕ ಪರಿಹಾರದ ಸಿದ್ಧತೆಯಲ್ಲಿ ನಾ ತೊಡಗಿದ್ದೇನೆ."

ಈ ಸಮಸ್ಯೆಯ ಮಹತ್ವವನ್ನು ವಿವರಿಸುತ್ತಾ ಇನ್ನು ಮುಂದೆ ಅವರು ಹೀಗೆ ಹೇಳಿದ್ದಾರೆ: "ಒಂದು ಪಕ್ಷ ಇದು ಯಾರೋ ಒಬ್ಬರ ಹಸಿವಿನ ಅಥವಾ ಕೆಲವರ ಸಂಕಟ ನಿವಾರಣೆಯ ಸಮಸ್ಯೆಯಾಗಿದ್ದಿದ್ದರೆ ನಾನು ದಾನ ಬೇಡುತ್ತಿದ್ದೆ, ಸ್ವಲ್ಪ ಸ್ವಲ್ಪ ಕೊಟ್ಟುಬಿಡುವುದರಿಂದ ಕೆಲಸ ತೀರಿಹೋಗುತ್ತಿತ್ತು; ಆದರೆ ಇಲ್ಲಿಯಾದರೋ ಒಂದು ರಾಜಕೀಯ ಪ್ರಶ್ನೆಯನ್ನು ಬಿಡಿಸಬೇಕಾಗಿದೆ, ಒಂದು ಸಾಮಾಜಿಕ ಸಮಸ್ಯೆಯನ್ನು ಪರಿಹರಿಸಬೇಕಾಗಿದೆ, ಈ ಸಮಸ್ಯೆ ಕೇವಲ ತೆಲಂಗಾಣದ್ದು ಮಾತ್ರವಲ್ಲ, ಬರಿಯ ಹಿಂದೂಸ್ಥಾನದ್ದಷ್ಟೇ ಅಲ್ಲ, ಇಡೀ ಜಗತ್ತಿಗೇ ಅನ್ವಯಿಸುವಂಥದು. ಯಾವಾಗ ಇಂಥ ರಾಜಕೀಯ ಹಾಗೂ ಸಾಮಾಜಿಕ ಕ್ರಾಂತಿಯ ವಿಷಯ ಬರುತ್ತದೋ ಆಗ ಮನೋವೃತ್ತಿಯನ್ನೇ ಬದಲಾಯಿಸಬೇಕಾದ ಅಗತ್ಯ ಉಂಟಾಗುತ್ತದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತೆಲಂಗಾಣದ ಸಾಕ್ಷಾತ್ಕಾರ ಮತ್ತು ಪ್ರತ್ಯಕ್ಷ ಕಾರ್ಯ

ಈ ರೀತಿಯಾಗಿ ತೆಲಂಗಾಣದ ಗಂಭೀರತಮ ಸಮಸ್ಯೆ ಮತ್ತು ಸಹಜವಾಗಿ ಹುಟ್ಟಿದ ಅದರ ಪರಿಹಾರ-ಇವುಗಳಿಂದ ಅವರು ಅಲ್ಲಿ ಅಭೂತಪೂರ್ವ ಸಾಕ್ಷಾತ್ಕಾರ ಆಗುಗೊಳಿಸಿದರು. ಈ ಅಹಿಂಸಾತ್ಮಕ ಪರಿಹಾರದ ಮೂಲಕ ಈ ಸಮಸ್ಯೆ ಬಗೆಹರಿಯುವುದಾದರೆ ಅದೊಂದು ಅದ್ಭುತವಾದ ಶಾಂತಿಪೂರ್ಣ ಕ್ರಾಂತಿಯೇ ಆದೀತೆಂದು ಅವರಿಗೆ ಖಾತ್ರಿಯಾಯಿತು. ಪ್ರೇಮ ಮತ್ತು ದಾನದ ಒಂದು ಅದ್ಭುತವಾದ ವಾತಾವರಣವನ್ನೇ ಅವರು ಅಲ್ಲಿ ನಿರ್ಮಿಸಿದರು. ಜಮೀನುದಾರರೂ ಇದರಲ್ಲಿ ಸಾಕಷ್ಟು ಭಾಗವಹಿಸಿದರು, ಬಡವರೂ ತಮ್ಮ ಅಳಿಲು ಸೇವೆ ಸಲ್ಲಿಸಿದರು, ಕಾರ್ಯಕರ್ತರೂ ತಮ್ಮ ಕೆಲಸ ನಡೆಸುತ್ತ ಸಾಗಿದರು. ಇದೆಲ್ಲ ಅನುಭವವನ್ನೂ ಕುರಿತು ವಿನೋಬಾಜೀ, "ನನಗೆ ಅಲ್ಲಿ ಮಾನವತೆಯ ಸಾಕ್ಷಾತ್ಕಾರವಾಯಿತು" ಎಂಬ ಈ ಮಾತುಗಳಲ್ಲಿ ತಮ್ಮ ಅಭಿಪ್ರಾಯ ಪ್ರಕಟಿಸಿದರು. ಜನತೆಗೂ ಸಹ ಅನೇಕ ವರ್ಷಗಳ ಬಳಿಕ ಈ ಕೆಲಸದ ಮೂಲಕ ಆತ್ಮ ಪರಿಚಯ, (ತಮ್ಮ ತನದ ಅರಿವು) ಉಂಟಾಯಿತು! ಭೂಮಿದಾನ ಅದರ ಒಂದು ಸ್ಥೂಲಸ್ವರೂಪಮಾತ್ರ, ಅದು ವಿರಾಟ ಸ್ವರೂಪವನ್ನು ತಳೆಯುವ ಸಾಮರ್ಥ್ಯವನ್ನು ಹೊಂದಿದೆ. ಈ ಯಜ್ಞದಲ್ಲಿ ವಿನೋಬಾಜೀಗೆ ಒಟ್ಟು ೧೩ ಸಾವಿರ ಎಕರೆ ಜಮೀನು ಸುಮಾರು ೬೦೦ ದಾನಿಗಳಿಂದ ೨೫-೨೫ ತಿಂಗಳುಗಳ ಅವಧಿಯಲ್ಲಿ ಅವರಿಗೆ ದೊರೆಯಿತು. ಅಂದರೆ ದಿನಕ್ಕೆ ಸರಾಸರಿ ೨೦೦ ಎಕರೆ ಜಮೀನು ಸಿಕ್ಕಿದಂತಾಯಿತು. ಇಪ್ಪತ್ತು ಇಪ್ಪತ್ತು, ಮೂವತ್ತು ಮೂವತ್ತು ವರ್ಷಗಳಿಂದ ಬಗೆಹರಿಯದೆ ಉಳಿದಿದ್ದ ಜಮೀನಿನ ವ್ಯಾಜ್ಯಗಳನ್ನು ಪರಿಹರಿಸಿದರು. ವಿನೋಬಾಜೀ ಅಲ್ಲಿಂದ ಹಿಂತಿರುಗಿ ಬಂದ ಬಳಿಕವೂ ಅಲ್ಲಿನ ಭೂದಾನ ಸಮಿತಿಗೆ ಸುಮಾರು ೩ ಸಾವಿರ ಎಕರೆ ಜಮೀನು ಇಲ್ಲಿಯವರೆಗೆ ಲಭಿಸಿದೆ, ಇನ್ನೂ ಬರುತ್ತಿದೆ.

ಸಾಮ್ಯಯೋಗದ ಸಾಧನೆ

ತೆಲಂಗಾಣದಿಂದ ಹಿಂತಿರುಗಿದ ಬಳಿಕ ಪರಂಧಾಮ-ಪವನಾರ್‌ನಲ್ಲಿ ವಿನೋಬಾಜೀ ಹಿಂದೆ ಅವರೇ ಯಶಸ್ವೀ ಹಾಗೂ ಸ್ಥಿರವಾದ ತಳಪಾಯ ಹಾಕಿ ಹೋಗಿದ್ದ ಸಾಮ್ಯಯೋಗದ ಕೆಲಸದಲ್ಲಿ ನಿರತರಾದರು. ಅವರ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಕಾಂಚನ ವಿಮುಕ್ತಿಯ ಪ್ರಯೋಗದಲ್ಲಿ ಹಿಂದಿನಂತೆ ತಲ್ಲೀನರಾದರು. ಆ ಕೆಲಸವನ್ನು ಅವರು ಅಲ್ಲಿನ ಕೆಲ ಯುವಕ ಸಂಗಾತಿಗಳೊಡನೆ ಆರಂಭಿಸಿದ್ದರು. ಈ ಸಾಮ್ಯಯೋಗ ಸಾಧನೆಯ ಕೆಲಸದ ಮೂಲಕ ಅವರು ಅಹಿಂಸಕ ಸಮಾಜರಚನೆಯ ಕಾಂಚನ ವಿಹೀನ ಸ್ವರೂಪದ ಒಂದು ಇಣುಕು ನೋಟವನ್ನು ಸಾಧಿಸಿದ್ದರು. ಈ ಕಾಂಚನ ಮುಕ್ತಿ ಪ್ರಯೋಗವನ್ನು ಅರಿಯುವವರೆಗೆ ವಿನೋಬಾಜೀಯ ಈ ಆಂದೋಲನದ ಪೂರಾ ಅರಿವು ಬರುವುದು ಶಕ್ಯವಿಲ್ಲ. ತೆಲಂಗಾಣಾ ಯಾತ್ರೆಯಲ್ಲಿ ಅವರಿಗೆ ಸಿಕ್ಕಿದ ಆಂತರಿಕ ಬಲ ಈ ಕಾಂಚನ ವಿಮುಕ್ತಿ (ಕಾಸಿನಿಂದ ಬಿಡುಗಡೆ) ಪ್ರಯೋಗದಿಂದಲೇ ಬಂತೆಂದು ಅವರು ಸ್ಪಷ್ಟವಾಗಿ ಹೇಳುತ್ತಾರೆ. ಅಹಿಂಸಕ ಸಮಾಜರಚನೆಯ ದಿಕ್ಕಿನಲ್ಲಿ ಇಂದು ಅವರು ಭೂಮಿದಾನ ಯಜ್ಞದ ಪ್ರೇರಕರಾಗಿ ಮುಂದುವರಿಯುತ್ತಿರುವುದೂ ಈ ಪ್ರಯೋಗದ ಒಂದು ರೂಪವೇ, ಒಂದು ಕಾರ್ಯಕ್ರಮವೇ ಮತ್ತು ತೆಲಂಗಾಣದಲ್ಲಿ ಅವರು ಗಳಿಸಿದ ಯಶಸ್ಸಿನ ಸ್ಫೂರ್ತಿಸ್ಸು ಇದೇ. ಆದಕಾರಣ ಅವರು ಸಾಮ್ಯಯೋಗದ ಸಾಧನೆಯಿಂದೇ ಇದನ್ನು ಭಾವಿಸಿ ಪವನಾರ್‌ಗೆ ಹಿಂತಿರುಗಿದ ಬಳಿಕ ಈ ರೀತಿ ಹೇಳಿದರು :

"ಪರಂಧಾಮದಲ್ಲಿ ನಡೆಯುತ್ತಿರುವ ಸಾಮ್ಯಯೋಗ ಪ್ರಯೋಗದ ಸಿದ್ಧಿ (ಗೆಲುವು) ಆಗುವುದಾದರೆ ಈ ಸಮಸ್ಯೆಯ ಪರಿಹಾರ ನಮಗೆ ಸಿಕ್ಕಿ ಬಿಡುತ್ತದೆ. ಅಂತಲೇ 'ಭೂದಾನ' ಕ್ಕಿಂತ ಹೆಚ್ಚು ಮಹತ್ತರವಾದ ಈ ಕೆಲಸದಲ್ಲಿ ನಾನು ಈಗ ತೊಡಗಬೇಕಾಗಿದೆ. ತೆಲಂಗಾಣದ ಯಾತ್ರೆಗೆ ಮುಂಚಿತವಾಗಿಯೂ ನನ್ನ ಈ ಪ್ರಯೋಗ ಸಾಗಿತ್ತು ಮತ್ತು ತೆಲಂಗಾಣದಲ್ಲಿ ಆದ ಸ್ವಲ್ಪ ಕೆಲಸವೂ ಈ ಪ್ರಯೋಗದ ಕಾರಣದಿಂದಲೇ ನಡೆಯಲು ಸಾಧ್ಯವಾಯಿತು."

ಈ ಬಗೆಯಾಗಿ ತೆಲಂಗಾಣ ಕ್ರಾಂತಿಯ ಬೇರುಗಳು ಇಷ್ಟು ದೂರ ಹೋಗಿವೆ. ಈ ಅಹಿಂಸಕ ಪ್ರಯೋಗ ಜಗತ್ತಿನ ಇತರ ವಿಚಾರ ಧಾರೆಗಳ ಪಂಙ್ತಿಯಲ್ಲಿ ತನ್ನ ಸ್ವತಂತ್ರ ಹಾಗೂ ವಿಶಿಷ್ಟ ಸ್ಥಾನ ಪಡೆದ ಪ್ರತ್ಯಕ್ಷ ಪರಿಹಾರದ ರೂಪದಲ್ಲಿ ನಮ್ಮ ಮುಂದೆ ಇದೆ. ನಮ್ಮ ರಾಷ್ಟ್ರಪಿತ ರಾಜಕೀಯ ಕ್ಷೇತ್ರದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ರೂಪದಲ್ಲಿ ತೋರಿದ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದಾರಿಯಂತೆ ಈ ಪ್ರಯೋಗ ಜಗತ್ತಿನ ಆರ್ಥಿಕ ಸಾಮಾಜಿಕ ಸಮಸ್ಯೆಯ ಪರಿಹಾರದ ಕಾರ್ಯಕಾರೀ ಮಾರ್ಗವಾಗಿದೆ. "ಗಾಂಧೀಜೀಯ ಸರ್ವೋದಯ ವಾದ ಅಥವಾ ಸಾಮ್ಯಯೋಗದ ಯುಗ ಸಾಪೇಕ್ಷ್ಯ ಹಾಗೂ ಪರಿಣತ ರೂಪವೇ ಈ ಕಾರ್ಯ." ವಿನೋಬಾಜೀಗೆ ಅವರ ಕಾರ್ಯದಲ್ಲಿ ಸತತ ಬಲ ನೀಡುತ್ತಿರುವುದು ಗಾಂಧೀಜೀಯ ಪ್ರೇರಣಾರೂಪವೇ, ವಿನೋಬಾಜೀ ತೆಲಂಗಾಣದಿಂದ ಮರಳಿದ ಬಳಿಕ ಸೇವಾಗ್ರಾಮದಲ್ಲಿ ನುಡಿದ ಈ ಸಂಕೇತಾತ್ಮಕ ಮಾತುಗಳಿಂದ ಈ ವಿಷಯ ಸ್ಪಷ್ಟವಾಗುತ್ತದೆ. ಅವರು ಹೇಳಿದರು: "ನಾನು ಯಾವ ಬಲವನ್ನು ಇಲ್ಲಿಂದ ಪಡೆದುಕೊಂಡು ಹೋಗಿದ್ದೆನೋ ಅದನ್ನು ಮತ್ತೆ ಇಲ್ಲಿಯೇ ಸಮರ್ಪಣಮಾಡುತ್ತೇನೆ ಮತ್ತು ಇಲ್ಲಿ ಪಡೆದಿರುವ ಎಲ್ಲಾ ಬಲವನ್ನು ಇಲ್ಲಿಯೇ ನಿಮಗೆ ಸಮರ್ಪಿಸುತ್ತೇನೆ. ಸುಮ್ಮನೆ ನಾಳೆ ಪವನಾರಿಗೆ ಹೊರಡುತ್ತೇನೆ."

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮೂಲಭೂತ ವಿಚಾರಧಾರೆ ಮತ್ತು ವಿಸ್ತರಣೆ

ತೆಲಂಗಾಣದ ನಂತರ

ಎರಡುವರೆ ತಿಂಗಳವರೆಗೆ ಸಾಮ್ಯಯೋಗದ ಪ್ರಕರಣದಲ್ಲಿ ತೊಡಗಿದ್ದುದುನಃ ೧೩-೯-೫೧ ರಂದು ಪಂಡಿತ ನೆಹರೂರವರ ಆಹ್ವಾನವನ್ನು ಮನ್ನಿಸಿ ದೆಹಲಿಯಲ್ಲಿ ಅವರನ್ನು ಕಾಣಲು ಪರಂಧಾಮ-ಪವನಾರ್ ಆಶ್ರಮದಿಂದ ಉತ್ತರ ಭಾರತದ ಪಾದಯಾತ್ರೆ ಪ್ರಾರಂಭಿಸಿದರು. ಅದು ಅವರ ಐವತ್ತೇಳನೇ ಹುಟ್ಟಿದಹಬ್ಬದ ಮರುದಿನ. ತಮ್ಮ ಈ ಎರಡನೇ "ಸರ್ವೋದಯಯಾತ್ರೆ"ಯಲ್ಲಿಯೂ ಪುನಃ ಜನರೆದುರಿಗೆ ಭೂದಾನಯಜ್ಞದ ಕಾರ್ಯಕ್ರಮವನ್ನೇ ಇಟ್ಟರು. ಈ ಯಾತ್ರೆಯನ್ನು ವರ್ಧಾ-ಪವನಾರ್‌ನಿಂದ ಪ್ರಾರಂಭಿಸಿದರು. ತೆಲಂಗಾಣದಲ್ಲಿ ವಿನೋಬಾರವರಿಗೆ ಸಂಗ್ರಹವಾದ ಜಮೀನು ಕೆಲವೊಂದು ವಿಶೇಷ ಪರಿಸ್ಥಿತಿಯಿಂದಲೋ, ಇಲ್ಲವೇ ಕಮ್ಯುನಿಸ್ಟರ ಒತ್ತಾಯದಿಂದಲೋ ಬಂದಿರಬೇಕೆಂಬ ಕಾರ್ಯಕರ್ತರ ಭ್ರಮೆ, ಎರಡುವರೆತಿಂಗಳ ಕಾಲ ಸುಮ್ಮನೆ ತಮ್ಮ ಆಶ್ರಮದಲ್ಲಿದ್ದು, ಆಗತಾನೆ ಹೊರಟಿದ್ದ ವಿನೋಬಾಜಿಯವರ ಯಾತ್ರೆಯ ಫಲವಾಗಿ ತಾನೇತಾನಾಗಿ ದೂರವಾಯಿತು. ಕಾರ್ಯಕರ್ತರಲ್ಲಿ ಅಪಾರವಾದ ಉತ್ಸಾಹ, ಅನುಕೂಲವಾದ ವಾತಾವರಣ ನಿರ್ಮಾಣವಾಯಿತು. ಮಳೆಹನಿಯಂತೆ ಅಲ್ಲಲ್ಲಿ ಭೂದಾನ ಸಿಕ್ಕಿತು. ಅವರು ಯಾತ್ರೆ ಮುಂದುವರಿಸಿದಂತೆಲ್ಲಾ ಬರುವ ದಾನವೂ ಹೆಚ್ಚಾಗುತ್ತ ಬಂತು. ಇಂದು ಭೂದಾನಯಜ್ಞ ಬಹಳ ವ್ಯಾಪಕ ರೂಪವನ್ನುತಾಳಿದೆ. ಹೊಸವಾತಾವರಣ ನಿರ್ಮಾಣಸಹ ವ್ಯಾಪಕವಾಗಿ ಆಗುತ್ತಿದೆ. ಆದರೆ ಏನೋ ಸ್ವಲ್ಪ ಉತ್ಸಾಹ, ಶ್ರದ್ಧೆಮೂಡಿ ಬಿಡುವುದು ಮಾತ್ರ ಬದಲಾವಣೆ ಎನಿಸಿಕೊಳ್ಳುವುದಿಲ್ಲ. ಕ್ರಾಂತಿಯನ್ನು ತಡೆಗಟ್ಟುವುದೂ ವಾತಾವರಣ ಪರಿವರ್ತನೆ ಎನಿಸಿಕೊಳ್ಳುವುದಿಲ್ಲ. ವಿನೋಬಾಜೀಯವರು ಸ್ಪಷ್ಟವಾಗಿ ಹೇಳಿಯೇ ಇದಾರೆ, "ನನ್ನ ಉದ್ದೇಶ ಕ್ರಾಂತಿಯನ್ನು ತಡೆಗಟ್ಟುವುದಲ್ಲ. ಹಿಂಸಾಕ್ರಾಂತಿಯನ್ನು ನಾನೇನೋ ತಡಗಟ್ಟ ಬಯಸುತ್ತೇನೆ. ಆದರೆ ಅಹಿಂಸಾತ್ಮಕ ಕ್ರಾಂತಿಯನ್ನು ತರಬಯಸುತ್ತೇನೆ. ಶಾಂತಿಯುತ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಾಪ ಮಾರ್ಗದಲ್ಲಿ ಭೂಸಮಸ್ಯೆಯನ್ನು ಬಗೆಹರಿಸುವುದರ ಮೇಲೆಯೇ ನಮ್ಮ ದೇಶದಮುಂದಿನ ಸುಖ ಶಾಂತಿಗಳು ನಿಂತಿವೆ. ಕಾಸೂನಿನ ಬಂಧನ ಜೌಕಟ್ಟು ನಮ್ಮ ಕೆಲಸಕ್ಕೆ ಅಡ್ಡಿ ಬರದಂತಹ ವಾತಾವರಣೆ ನಿರ್ಮಾಣಕ್ಕಾಗಿ ನಾನು ಪ್ರಯತ್ನಿಸುತ್ತಿದ್ದೇನೆ. ನಾನಂತೂ ಶ್ರೀಮಂತರಿಂದಲೂ, ಬಡವರಿಂದಲೂ ನೇರವಾಗಿ ಜಮೀನು ತೆಗೆದುಕೊಳ್ಳುತ್ತೇನೆ....."

ಐತಿಹಾಸಿಕ ಅವಶ್ಯಕತೆ

ನಿಜವಾಗಿ ನೋಡಿದರೆ ಇದರ ಐತಿಹಾಸಿಕ ಅವಶ್ಯಕತೆ ಬೆಲೆಯನ್ನೇ ಕಟ್ಟಲಾರದಷ್ಟು ದೊಡ್ಡದು. "ಯಾರಬಳಿ ಭೂಮಿ ಇದೆಯೋ, ಅವರು ತಮ್ಮ ಭೂಮಿಯನ್ನು ಭೂಮಿಹೀನರಿಗಾಗಿ ಸ್ವೇಚ್ಛೆಯಿಂದ ಕೊಡಲಿ. ಈ ನನ್ನ ಪ್ರಯತ್ನ ಇತಿಹಾಸದ ಪ್ರವಾಹಕ್ಕೆ ವಿರುದ್ಧವಾದದ್ದು ಎಂಬುದನ್ನು ನಾನು ಒಪ್ಪಲಾರೆ. ಇದುವರೆಗೆ ಇತಿಹಾಸದಲ್ಲಿ ಏನೇನು ನಡೆದಿದೆಯೋ ಅವೆಲ್ಲಕ್ಕಿಂತಲೂ ಹೊಸದಾದ್ದು ಪ್ರಪಂಚದಲ್ಲಿ ನಡೆಯಬಲ್ಲವು ಎಂಬುದನ್ನು ತಿಳಿಯಬೇಕು. ರಷ್ಯದ ಕ್ರಾಂತಿಯಂಥಹ ಘಟನೆ ಜಗತ್ತಿನಲ್ಲಿ ಹಿಂದೆಂದೂ ನಡೆದಿರಲಿಲ್ಲ. ಆದರೆ ಅದು ನಡೆಯಿತು. ಅದೇ ರೀತಿ ಇದೂ ಆಗಬಲ್ಲದು. ಏನೇಇರಲಿ, ನಾನು ನಡೆಸುತ್ತಿರುವ ಕಾರ್ಯಕ್ರಮ ಇತಿಹಾಸದ ಪ್ರವಾಹಕ್ಕೆ ವಿರುದ್ಧವಾದುದಲ್ಲ. ಆದರೆ ಇದು ಐತಿಹಾಸಿಕ ಅವಶ್ಯಕತೆ ಮತ್ತು ಯುಗದ ಬೇಡಿಕೆ ಎಂದು ನಾನು ತಿಳಿದಿದೇನೆ" ಎನ್ನುತ್ತಾರೆ ಆಚಾರ್ಯ ವಿನೋಬಾಜಿ. ಭೂ ಸಮಸ್ಯೆಯ ವಿಷಮತೆ ಭಾರತ ಇತಿಹಾಸದಲ್ಲೇ ಬಹಳ ತೀವ್ರವಾಗಿದೆ. ಆದ್ದರಿಂದ ಯುಗದ ಬೇಡಿಕೆಯಾದ ಭೂದಾನಯಜ್ಞದ ಬೆಲೆ ಕಟ್ಟಲಾರದಷ್ಟು ಹೆಚ್ಚಿನದು. ವಿನೋಬಾಜಿಯವರು ಇದರ ಐತಿಹಾಸಿಕ ದಿಗ್ದರ್ಶನ ಮಾಡಿಸುತ್ತಾ ಬಂಗಾಳ, ಹೈದರಾಬಾದ್‌ಗಳ ಉದಾಹರಣೆ ಕೊಟ್ಟು ಒಮ್ಮೆ ಹೇಳಿದಾರೆ.

ಇತಿಹಾಸದ ಹಿನ್ನೆಲೆಯಲ್ಲಿ

"ಈಸ್ಟ್ ಇಂಡಿಯಾ ಕಂಪೆನಿ ರಾಜ್ಯವಾಳುತ್ತಿದ್ದ ಕಾಲದಲ್ಲಿ, ಬಂಗಾಳದಲ್ಲಿ, ಪ್ರತಿಹಳ್ಳಿಯಲ್ಲೂ ಸ್ಕೂಲು ನಡೆಯುತ್ತಿತ್ತು. ಪ್ರತಿ ನಾನೂರು ಜನಸಂಖ್ಯೆಗೊಂದರಂತೆ ಸ್ಕೂಲು ಇತ್ತು. ಪ್ರತಿ ಹಳ್ಳಿಯಲ್ಲೂ ಗ್ರಾಮ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪಂಚಾಯಿತಿ ಇತ್ತು. ಹಳ್ಳಿಯ ಎಲ್ಲ ಕೆಲಸ ವ್ಯವಹಾರಗಳನ್ನು ಗ್ರಾಮ ಪಂಚಾಯ್ತಿಯೇ ನೋಡಿಕೊಳ್ಳುತ್ತಿತ್ತು. ಹೀಗೆ ಈಸ್ಟ್ ಇಂಡಿಯಾ ಕಂಪೆನಿಯೇ ಬರೆದಿಟ್ಟಿದೆ. ಹಳ್ಳಿಯಲ್ಲಿ ಎಲ್ಲ ಕಸುಬುಗಳು ನಾಶವಾದ್ದರಿಂದ ಗ್ರಾಮಪಂಚಾಯತಿಗಳೂ ಮುರಿದುವು. ಕ್ರಮಕ್ರಮವಾಗಿ ಹಳ್ಳಿಗರೆಲ್ಲಾ ಅನಕ್ಷರಸ್ಥರಾದರು. ಕೆಲವರು ಮಾತ್ರ ಇಂಗ್ಲೀಷ್ ಕಲಿತವರಾದರು. ಮಿಕ್ಕವರೆಲ್ಲಾ ಪೂರ್ಣವಾಗಿ ಅನಕ್ಷರಸ್ಥರಾಗಿಯೇ ಉಳಿದರು. ಶಿಕ್ಷಣಪಡೆದ ಈ ಕೆಲವು ಮಂದಿಯು ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಹೋದರು. ಹೀಗೆ ಹಳ್ಳಿಗಳು ವಿದ್ಯಾಹೀನ, ಸಂಪತ್ತಿಹೀನವಾದುವು. ಇವೆಲ್ಲದರಿಂದ ಹಳ್ಳಿಗಳ ಸ್ಥಿತಿ ಕೆಡುತ್ತಾ ಬಂದಿತು. ಹಳ್ಳಿಗರ ಕೈಯಲ್ಲಿ ಭೂಮಿಯಾಗಲೀ, ಇತರ ಕಸುಬಾಗಲೀ ಉಳಿಯಲಿಲ್ಲ. ಬಡ ಜನರೂ ಸಾಮಾನ್ಯಜನರೂ ಸಾಗುವಳಿ ಮಾಡುತ್ತಿದ್ದರು. ಇದರ ಜೊತೆಗೆ ಕೆಲವು ಉಪಕಸುಬುಗಳನ್ನು ಮಾಡುತ್ತಿದ್ದರು. ಈ ಉಪಕಸುಬುಗಳು ನಾಶವಾದಾಗ ಜನ ಕೇವಲ ಸಾಗುವಳಿಯಿಂದಲೇ ಬದುಕಬೇಕಾಯಿತು. ಆಗ ಅನೇಕರು ಸಾಲಮಾಡಿ ಜೀವನಮಾಡಬೇಕಾಯಿತು. ಸಣ್ಣಸಣ್ಣ ಜನರಂತೂ ಸಾಗುವಳಿಮಾಡದವರಾದರು. ಶ್ರೀಮಂತರಮನೆಗೆ ಬಡವರ ಮತ್ತು ಸಾಮಾನ್ಯಜನರ ಭೂಮಿ ಹೋಗಿ ಸೇರಿತು. ಕೊನೆಗೆ ಕೇವಲ ಕೆಲವರ ಬಳಿ ನೂರಾರು ಎಕರೆಯಷ್ಟು ನೆಲ, ಕೆಲವು ಮಂದಿಯ ಬಳಿ ಸ್ವಲ್ಪ ನೆಲ. ಮತ್ತು ಅನೇಕರಿಗೆ ಏನೂ ಇಲ್ಲದಸ್ಥಿತಿ ಏರ್ಪಟ್ಟಿತು.....ಪೈದರಾಬಾದಿನಲ್ಲಂತೂ ಜಹಗೀರುದಾರರ, ದೇಶ್‌ಮುಖರ, ಸಾಹುಕಾರರ ಒಂದು ವರ್ಗವೇ ಏರ್ಪಟ್ಟಿತು. ರಾಜ್ಯದ ಆಡಳಿತವೂ ಇವರಮೂಲಕವೇ ನಡೆಯತೊಡಗಿತು."

ಸ್ವಲ್ಪ ಹೆಚ್ಚುಕಮ್ಮಿ ಇದೇ ಸ್ಥಿತಿ ಇಡೀ ಭಾರತದಲ್ಲಿ ಎಲ್ಲಪ್ರಾಂತಗಳಲ್ಲೂ ಇದೆ. ಇಂದು ಭೂಸಮಸ್ಯೆ ಇಷ್ಟು ಪ್ರಖರವಾಗಿರಲು ಕಾರಣ ಈ ರೋಮಾಂಚಕಾರೀ ಕಥೆ.!

ಭಾರತದಂತೆಯೇ ಇತರದೇಶಗಳಲ್ಲೂ ಈ ಸಮಸ್ಯೆ ದುಸ್ತರವಾಗಿಯೇ ಇದೆ. ಕೆಲವುಕಡೆ ಪ್ರಜ್ವಲವಾಗುವುದರಲ್ಲಿದೆ, ಕೆಲವುಕಡೆ ಪ್ರಜ್ವಲವಾಗಿದೆ, ಇನ್ನು ಕೆಲವುಕಡೆ ಸಿಡಿಯತೊಡಗಿದೆ. ಕೆಲವು ಕಡೆಗಳಲ್ಲಿ ಹಿಂಸೆಯ ಅಥವಾ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಇತರ ಇದೇರೀತಿಯ ಮಾರ್ಗಗಳಿಂದ ಸಮಸ್ಯೆ ಪರಿಹಾರವಾಗಿದೆ. ಈ ವಿಚಾರಕ್ಕೆ ಚೀಣಾದೇಶದ ಕ್ರಾಂತಿ ಈಗತಾನೇ ನಡೆದಿರುವ ಉದಾಹರಣೆ. ಒಟ್ಟಿನಲ್ಲಿ ಈ ಸಮಸ್ಯೆ ಕೇವಲ ಭಾರತದ್ದಲ್ಲ; ಇಡಿ ಜಗತ್ತಿನ ಸಮಸ್ಯೆ. ವಿನೋಬಾಜೀಯವರ ಮಾತುಗಳಲ್ಲಿ:

ಪ್ರಪಂಚದ ಮುಕ್ತಿಯ ಮಾರ್ಗ

"ಇದೊಂದು ಅಂತರರಾಷ್ಟ್ರೀಯ ಸಮಸ್ಯೆ. ಇದನ್ನು ನಾವು ಶಾಂತಿಮಯ ಮಾರ್ಗದಲ್ಲಿ ನಿವಾರಣೆ ಮಾಡಿಕೊಂಡರೆ ಸ್ವರಾಜ್ಯಪ್ರಾಪ್ತಿಯ ನಂತರ ಒಂದು ದೊಡ್ಡ ಸಾಧನೆಯನ್ನೇ ಮಾಡಿದಂತಾಗುತ್ತದೆ. ಹಿಂದೂಸ್ಥಾನ ಸ್ವರಾಜ್ಯಗಳಿಸಿತು. ಅಹಿಂಸೆಯಿಂದ ಗಳಿಸಿತು. ಇದನ್ನು ಪ್ರಪಂಚ ನೋಡಿದೆ. ಇದರಿಂದ ಪ್ರಪಂಚಕ್ಕೆ ಆಶಾಕಿರಣ ಮೂಡಿದೆ. ಅದೇ ರೀತಿಯಲ್ಲಿಯೇ ನಾವು ಈ ಸಮಸ್ಯೆಯನ್ನು ಅಹಿಂಸಾತ್ಮಕ ರೀತಿಯಲ್ಲಿಯೇ ಬಿಡಿಸಬಲ್ಲೆವು. ಈ ರೀತಿಯಲ್ಲಿ ನಾವು ಈ ಸಮಸ್ಯೆಯನ್ನು ಬಿಡಿಸಿಕೊಂಡರೆ ಇದರಿಂದ ಇಡೀ ಪ್ರಪಂಚಕ್ಕೆ ಮುಕ್ತಿಯ ಮಾರ್ಗ ದೊರಕಿಬಿಡುತ್ತದೆಂದು ನನ್ನ ನಂಬಿಕೆ."

ಏಕೆಂದರೆ "ಇಂದು ಜಗತ್ತಿನಜನ ಮಾರ್ಗದರ್ಶನಕ್ಕಾಗಿ ಭಾರತದ ಕಡೆ ನೋಡುತ್ತಿದ್ದಾರೆ. ಈ ದೇಶದ ನಾಗರೀಕತೆ, ಸಂಸ್ಕೃತಿ ಬಹಳ ಪ್ರಾಚೀನವಾದದ್ದು. ಇಲ್ಲಿ ಗಾಂಧೀಜಿ ತಮ್ಮ ಅಹಿಂಸಾತ್ಮಕ ಪ್ರಯೋಗಗಳಿಂದ ವಿಶ್ವದಲ್ಲೇ ಒಂದು ಹೊಸ ಬೆಳಕನ್ನು ಬೀರಿದ್ದಾರೆ."

'ಯೋಗ್ಯಮನುಷ್ಯ'ನ ಕೆಲಸ

ಪ್ರಂಚದಲ್ಲಿ ಕೇವಲ ಸುಂಟರಗಾಳಿಯನ್ನೆಬ್ಬಿಸುವ ಇತರ ಮಾರ್ಗಗಳಿಂದ ಇಂದು ಕ್ರಾಂತಿ ಎಂಬ ಪದಕ್ಕೆ ತಪ್ಪು ಅರ್ಥ ಕಲ್ಪಿತವಾಗಿದೆ. ಕ್ರಾಂತಿ ಎಂದರೆ ಕೇವಲ ಹಿಂಸಕ ಕ್ರಾಂತಿಯೆಂದು ತಿಳಿಯಲಾಗಿದೆ. ಪ್ರಪಂಚದಲ್ಲಿ ಈ ಕೂಗೇ ಎಲ್ಲೆಲ್ಲೂ ಇದೆ. ಭಾರತದಲ್ಲೂ ಅಲ್ಲಲ್ಲಿ ಕೇಳಿಬರುತ್ತದೆ. ಇವೆಲ್ಲವರ ಇದಿರಾಗಿ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಭಾರತದಮಾರ್ಗ ಹೊಸ ಬೆಳಕನ್ನೇ ಬೀರಬೇಕಾಗಿದೆ. ವಿನೋಬಾಜಿಯವರ ಮಾತುಗಳಲ್ಲಿ "ಭಾರತದಲ್ಲಿ ಜನ ದೇಶದಲ್ಲಿ ಕ್ರಾಂತಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಾಗದೆ ನಿಲ್ಲುವುದಿಲ್ಲವೆಂದು ತಿಳಿದಿದಾರೆ. ಆದರೆ ಚೀಣಾ, ರಷ್ಯದಲ್ಲಿ ಆದಂತೆ ಆಗಬೇಕೆಂದು ಬಯಸುವುದಿಲ್ಲ. ಆದ್ದರಿಂದ ನಾನು ತೋರಿಸುವ ಮಾರ್ಗದಲ್ಲಿ ಅಹಿಂಸಕ ಕ್ರಾಂತಿ ಆಗುತ್ತದೆಂದು ನಂಬಿ ಜಮೀನು ಕೊಡುತ್ತಿದಾರೆ. ತೆಲಂಗಾಣದಲ್ಲಿ ಕಮ್ಯುನಿಸ್ಟರ ಅತ್ಯಾಚಾರಗಳಿಂದ ಭಯ ಭೀತರಾಗಿ ಜಮೀನುದಾರರು ತಮ್ಮ ಜಮೀನನ್ನು ದಾನಮಾಡಿದರೆಂದು ತಿಳಿದಿರುವ ಜನ ತಮ್ಮ ಭಾವನೆಗಳನ್ನು ಪುನರ್ವಿಮರ್ಶಿಸಿಕೊಳ್ಳಲಿ. ಸರಿಯಾದ ನಿಟ್ಟಿನಿಂದ ನೋಡಲಿ, ತಿಳಿಯಲಿ. ಈ ಜನ ತಮ್ಮ ಅಭಿಪ್ರಾಯವೇ ಸರಿಯೆಂದು ತಿಳಿಯುವುದಾದರೆ ಸರ್ವೋದಯದವೊದಲು ಸರ್ವನಾಶವಾಗಬೇಕು ಎಂಬುದನ್ನು ಒಪ್ಪಬೇಕಾದೀತು. ಆದರೆ ಹೀಗೇನೂ ಆಗಬೇಕಾಗಿಲ್ಲ. ಹಿಂದೂಸ್ಥಾನದಲ್ಲಿ ಸದ್ಭಾವನೆ ಬೇಕಾದಷ್ಟಿದೆ. ಅದನ್ನು ಜಾಗೃತಗೊಳಿಸುವ ಯೋಗ್ಯಮನುಷ್ಯಬೇಕು." ಆದರೆ ಈ ಯೋಗ್ಯತೆ ಅಹಿಂಸೆಯ ಸಾಧನೆಯಿಂದಲೇ ಬಂದೀತು. ಈ ಸಾಧನೆ ಮೊಟ್ಟಮೊದಲು ಹೃದಯಶುದ್ಧಿಯನ್ನು ಬೇಡುತ್ತದೆ. ಆಗ "ಪ್ರೇಮ ಮತ್ತು ವಿಚಾರದ ಎದುರಿನಲ್ಲಿ ಯಾವ ಶಕ್ತಿಗಳೂ ನಿಲ್ಲಲಾರವು." ಜನರ ಈ ಸದ್ಭಾವನೆಗಳನ್ನು ಜಾಗೃತಗೊಳಿಸುವುದರಲ್ಲಿರುವ ನಮ್ಮ ಯೋಗ್ಯತೆ, ವಿಚಾರಗಳನ್ನು ತಿಳಿಸುವಸಾಮರ್ಥ್ಯ, ತ್ಯಾಗಶಕ್ತಿ ಎಲ್ಲದರ ಪ್ರಭಾವವೂ ಬೀಳುತ್ತದೆ."

ಈ ಎಲ್ಲ ಕಾರ್ಯಕ್ರಮವೂ ನಮಗೆ ಬಹಳ ಕಾಲ ಹಿಡಿಸುವಂಥದು, ಅಥವಾ ಅವ್ಯವಹಾರ್ಯವೆಂದು ಕೆಲವರಿಗನಿಸುತ್ತದೆ. ಜಾಗೃತಿಯಾಗಿ ಫಲಕೊಡುವ ಹಿಂಸೆ ಮತ್ತು ಒತ್ತಾಯ ಪೂರ್ವಕವಾದ ಕಾನೂನನ್ನು ಕೆಲವರು ಬಯಸುತ್ತಾರೆ. ಇವೆರಡರ ಮಾರ್ಗದಿಂದ ಈಗಾಗಲೇ ಕೆಲವು ರಾಜ್ಯಗಳು ಸಮಸ್ಯೆಗಳನ್ನು ನಿವಾರಿಸಿಕೊಂಡಿರುವುದರಿಂದ ಈ ಭ್ರಮೆ ಕೆಲವರಿಗೆ ಇದೆ. ಆದರೆ ಹಿಂಸಾ ಮಾರ್ಗದಬಗ್ಗೆ ತೆಲಂಗಾಣದಲ್ಲಿ ಪ್ರತ್ಯಕ್ಷ ಅನುಭವ ಈರೀತಿ ಇದೆ:

ಭಾರತದ ಮಾರ್ಗ

"ಅಲ್ಲಿ ಕಮ್ಯುನಿಸ್ಟರು ನಡೆಸುತ್ತಿರುವ ಖೂನಿಯ ಮಾರ್ಗವನ್ನು ಅವರು ರಷ್ಯಾದಿಂದ ಕಲಿತಿದಾರೆ. ಆದರೆ ಈ ಮಾರ್ಗ ಭಾರತದಲ್ಲಿ ನಡೆಯು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಂಥದಲ್ಲ. ನಲಗೊಂಡಾದಲ್ಲಿ ಈ ಮಾರ್ಗವನ್ನು ಜನ ಬಹುಮಟ್ಟಿಗೆ ಅನುಸರಿಸಿ ನೋಡಿದರು. ಇದರಿಂದ ಒಳ್ಳೆಯ ಪರಿಣಾಮವೇನೋ ಆಗಲಿಲ್ಲ ವೆಂಬುದನ್ನು ನೀವೇ ನೋಡಿದಿರಿ. ಈ ಮಾರ್ಗ ಭಾರತದಲ್ಲಿ ನಡೆಯುವು ದಿಲ್ಲವೆಂದು ನಾನು ತಿಳಿದಿದೇನೆ." ಏಕೆಂದರೆ, ತೆಲಂಗಾಣ ರಾಜ್ಯವು ಹಿಂಸೆಯ ವ್ಯರ್ಥತೆಯನ್ನೂ, ಅಹಿಂಸಕಕ್ರಾಂತಿಯ ಸಾಮರ್ಥ್ಯವನ್ನೂ ತೋರಿಸಿಕೊಟ್ಟಿದೆ. ಅಲ್ಲಿ ಹಿಂಸೆ, ಕಾನೂನು ಇವೆರಡೂ ವಿಫಲವಾಗಿವೆ."

ವಿನೋಬಾಜಿಯವರು ಇದೆಲ್ಲವನ್ನೂ ಪ್ರತ್ಯಕ್ಷ ತಿಳುವಳಿಕೆಯಿಂದಲೇ ಹೇಳಿದಾರೆ.

ತೆಲಂಗಾಣದ ಪ್ರಯೋಗಶಾಲೆ

ನಿಜವಾಗಿ ನೋಡಿದರೆ, ತೆಲಂಗಾಣದ ಚಳುವಳಿ "ಸಾಮ್ಯವಾದದ ಒಂದು ಯಶಸ್ವೀ ಪ್ರಯೋಗಶಾಲೆ"ಯ ರೂಪದಲ್ಲಿ ನಡೆಯುತ್ತಿದೆ. ಅಲ್ಲಿ ಲಕ್ಷಾಂತರ ಎಕರೆ ಜಮೀನನ್ನು ಬಡವರಿಗೆ ನಿಜವಾಗಿ ಹಂಚಲಾಗಿದೆಯೆಂದು ಹೇಳುತ್ತಾರೆ. ಈ ಜಮೀನುಗಳು ಅವರಿಗೆ ಎಷ್ಟು ರಕ್ತಪಾತದಮೂಲಕ ಸಿಕ್ಕಿದೆ, ಹಂಚಿಕೆಯಾದಮೇಲೆ ಬಡವರ ಎಷ್ಟು ರಕ್ತಪಾತವಾಗಿ ಪುನಃ ಹಿಂತಿರುಗಿ ಕಿತ್ತುಕೊಳ್ಳಲಾಗುತ್ತದೆ, ಇದರಿಂದ ಎಷ್ಟು ಹಾನಿಯಾಗುತ್ತಿದೆ ಎಂಬುದನ್ನೆಲ್ಲಾ ನೋಡಿದರೆ ಅಲ್ಲಿ ಭೂಸಮಸ್ಯೆ ಪರಿಹಾರವಾಗಿಬಿಟ್ಟಿದೆ ಎಂದು ಧೈರ್ಯವಾಗಿ ತಿಳಿಯಲಾದೀತೇನು? ಜನಗಳ ಮನಸ್ಸಿನಲ್ಲಿ ಕ್ರಾಂತಿಯ ಪ್ರತ್ಯಕ್ಷದರ್ಶನ ವಿದೆಯೇ? ಇಂದು ಅಲ್ಲಿ ಕೇವಲ ಭಯ, ಖೂನಿ, ಲೂಟಿ ಅಥವಾ ಬೆಂಕಿಯಜ್ವಾಲೆಯ ಆಡಳಿತವಲ್ಲವೆ? ಯಾರೋ ಕೆಲವರು ಪುಂಡರು ಸಮರ್ಥಶಾಲಿಗಳಾದರೆ ಸಮಾಜ ತಾನೇ ತಾನಾಗಿ ಸಾಹಸಶೀಲವಾಗಲಾರದು. ಹೀಗೆ ವ್ಯಕ್ತಿಗತವಾದ ಹಿಂಸಾಚರಣೆಯಿಂದ ಕ್ರಾಂತಿ ಆಗಲಾರದು. ಅಜ್ಞಾನ, ಹಸಿವು, ದಾಸ್ಯದಲ್ಲಿರಲು ಸಹಾಯಕವಾದ ಕುಡಿತ, ಭಯ ಇತ್ಯಾದಿ ಅಲ್ಲಿ ಕಮ್ಮಿಯಾಗಿಲ್ಲ. ಜಮೀನಿನ ಸಮಸ್ಯೆಯೂ ಸರಿಯಾಗಿ ಬಗೆಹರಿದಿಲ್ಲ. ಮತ್ತೆ ಇವೆಲ್ಲವನ್ನೂ ತರಬಯಸುವ ಮಾರ್ಗವಂತೂ ಶಾಶ್ವತವಾಗಿ ಶಾಂತಿಸ್ಥಾಪನೆಯ ಮಾರ್ಗವಲ್ಲ. ಅಲ್ಲದೆ ಇದು ಭಾರತದ ಪ್ರಕೃತಿಗಂತೂ ಅನುಕೂಲ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ವಾದುದಲ್ಲ. ಇಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ಭಾರತ ತನ್ನದೇ ಆದ ವಿಶಿಷ್ಟಮಾರ್ಗಗಳನ್ನು ಅನುಸರಿಸಿ ಜಗತ್ತಿನೆದುರಿನಲ್ಲಿ ನಿಂತಿದೆ. ಈ ವಿಶಿಷ್ಟದೃಷ್ಟಿಯೇ ಈ ಭೂದಾನಯಜ್ಞದ ಹಿಂದೆಯೂ ಇದೆ. ಇದು ಭಾರತದಜನತೆ, ಭಾರತೀಯಪರಂಪರೆ, ಭಾರತೀಯಸಂಸ್ಕೃತಿಗೆ ಅನುಕೂಲವಾಗಿದೆ. ಇದರಲ್ಲಿ ಅಂಥದೇ ಕುಶಲತೆಯಸಾರ ಇದೆ. ಪೂಜ್ಯ ಕಾಕಾ ಸಾಹೇಬ್‌ಕಾಲೇಲ್‌ಕರರು ಸರಿಯಾಗಿಯೇ ವಿಶ್ಲೇಷಣೆಮಾಡಿದ್ದಾರೆ.

ನಮ್ಮದು ಮೂರನೇ ಮಾರ್ಗ

"ರಷ್ಯಾದಬಳಿ ಒಂದು ಮಾರ್ಗವಿದೆ ಎಂದು ಹೇಳಿದೆವು. ಅಮೆರಿಕಾದ ಬಳಿ ಎರಡನೇ ಮಾರ್ಗವೊಂದಿದೆ. ಭಾರತದ್ದು ಮೂರನೇ ಮಾರ್ಗ. ಆದರೆ ಅದರಲ್ಲಿ ಈ ಮೂರನೇ ಮಾರ್ಗದ ಚೈತನ್ಯ ಇಂದಿನವರೆಗೆ ಉತ್ಕಟ ರೂಪದಲ್ಲಿ ಪ್ರಕಟವಾಗಿರಲಿಲ್ಲ. ಅದು ಕಾನೂನಿನ ಮೂಲಕ ಅಥವಾ ಸರ್ಕಾರದ ಸಾಮರ್ಥ್ಯದ ಮೂಲಕ ಪ್ರಕಟವಾಗಿದ್ದರೆ ಅದನ್ನು ನಾವು ಮೂರನೇ ಮಾರ್ಗವೆನ್ನುತ್ತಿರಲಿಲ್ಲ. ಶ್ರೀ ವಿನೋಬಾಜಿಯವರು ಅಧ್ವರ್ಯುಗಳಾಗಿರುವ ಭೂದಾನಯಜ್ಞ, ಮತ್ತು ಪ್ರಪಂಚದಲ್ಲೆಲ್ಲಾ ಹರಡುತ್ತಿರುವ ಅಮೆರಿಕಾದ ಸಹಾಯ, ಇವೆರಡರಲ್ಲೂ ಮುಗಿಲಿನಷ್ಟು ಅಂತರವಿದೆ. ಎರಡರಲ್ಲೂ ಧೀರ್ಘದೃಷ್ಟಿಯೇನೋ ಇದೆ. ಆದರೆ ಒಂದರಲ್ಲಿ ದ್ರವ್ಯಶಕ್ತಿಯಲ್ಲಿ ನಂಬಿಕೆ ಇದೆ. ಅವರು ಹಣದಲೋಭದ ವೀಣೆಯಿಂದ ತಮ್ಮ ರಾಗ ಹಾಡುತ್ತಿದ್ದಾರೆ. ಮತ್ತೊಂದು ಮಾರ್ಗವಾದ ದಾನದ ತಳಹದಿಯಲ್ಲಿ ಆತ್ಮಶಕ್ತಿಯಿದೆ. ಅದರಬಳಿ ತ್ಯಾಗದ ಏಕನಾದವಿದೆ. ಅದರ ಭಜನೆ ಸಾತ್ವಿಕವಾದದ್ದು. ಕೊನೆಯಲ್ಲಿ ಇದಕ್ಕೇ ಜಯವಾಗುವುದು."

ಸಾಮ್ಯವಾದದ ಹೋರಾಟ

ಆದರೆ ಇದು ಕೇವಲ ಭೂದಾನ ಅಥವ ಭೂಮಿಗೆ ಸಂಬಂಧಿಸಿದ ಸಮಸ್ಯೆ ಮಾತ್ರವಲ್ಲ. ಇದೊಂದು ವಿಶಿಷ್ಟವಾದ ತತ್ವದರ್ಶನ. ಇಂದು ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ಉಪಯೋಗಿಸುತ್ತಿರುವ ಎಲ್ಲ ಮಾರ್ಗಗಳ ಇದಿರಾಗಿ ಈ ಪ್ರಯೋಗ ಪ್ರಾರಂಭಿಸಲ್ಪಟ್ಟಿದೆ. ಇಂದು ಸಾಮ್ಯವಾದ ಪ್ರಪಂಚದ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುತ್ತೇ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನೆಂದು ಹೊರಟು ತನ್ನ ಕೆಲವು ಉದಾಹರಣೆಗಳನ್ನು ಪ್ರಪಂಚದಲ್ಲಿ ತೋರಿಸಿದೆ. ಇವೆಲ್ಲವನ್ನು ಯೋಚಿಸಿಯೇ ಒಂದು ಶಾಂತಿಪೂರ್ಣವಾದ, ಕ್ರಾಂತಿಕಾರಿ ನಿವಾರಣ ಮಾರ್ಗವನ್ನು ಹಿಡಿದು ವಿನೋಬಾಜಿಯವರು ಗಾಂಧೀಜಿಯವರ ಪ್ರಯೋಗವನ್ನು ಮುಂದುವರಿಸಿದರು. ಇವೆರಡು ಮಾರ್ಗಗಳಲ್ಲೂ ಕೇವಲ ಎಲ್ಲೋ ಕೆಲವು ಅಭಿಪ್ರಾಯ ಭೇಧಗಳಾಗಲೀ ಅಥವಾ ವಿವರಣೆಗಳ ಭೇಧಗಳು ಮಾತ್ರವಾಗಲೀ ಇಲ್ಲ. ಎರಡು ವಿಚಾರ ಧಾರೆಗಳಲ್ಲಿ ಮೂಲಭೂತವಾದ ಕೆಲವು ವ್ಯತ್ಯಾಸಗಳಿವೆ. ಇದನ್ನು ಅವರು ಸ್ಪಷ್ಟವಾಗಿ ಹೇಳಿದಾರೆ.

ಸಮಾನತೆ: ಎರಡು ವಿಚಾರಗಳ ನಡುವೆ

"ಪ್ರಪಂಚದಲ್ಲೇನಾದರೂ ಎರಡು ಶಕ್ತಿಗಳ ಹೋರಾಟ ನಡೆಯುವುದಾದರೆ ಕಮ್ಯುನಿಸಂ ಅಥವಾ ಸಾಮ್ಯವಾದಕ್ಕೂ ಮತ್ತು ಸರ್ವೋದಯ ವಿಚಾರಕ್ಕೂ ಹೋರಾಟ ನಡೆಯುತ್ತದೆ ಎಂದು ನನ್ನ ಈ ಪ್ರವಾಸದ ಅನುಭವಗಳಿಂದ ನನ್ನ ನಂಬಿಕೆ ಮತ್ತಷ್ಟು ದೃಢವಾಗಿದೆ. ಪ್ರಪಂಚದಲ್ಲಿ ಉಳಿದಿರುವ ಇತರ ಎಲ್ಲ ಶಕ್ತಿಗಳೂ ಬಹಳ ದಿನ ಉಳಿಯುವಂಥವಲ್ಲ. ಹೋರಾಟ ನಡೆಯುವುದು ಇವೆರಡು ವಿಚಾರಗಳಲ್ಲಿ ಮಾತ್ರ. ಕಾರಣ, ಇವೆರಡರಲ್ಲಿ ಸಾಮ್ಯವೂ ಬಹಳ ಇದೆ. ವಿರೋಧವೂ ಬಹಳವಿದೆ. ಇವೆರಡಕ್ಕೂ ಜಗತ್ತಿನಲ್ಲಿ ಬೇಡಿಕೆ ಇದೆ.

ಗಾಂಧೀಜಿಯದೇ ಕೆಲಸ

ಈ ಕಾಲದ ಈ ಬೇಡಿಕೆಯ ಔಚಿತ್ಯವನ್ನೂ ಮಹತ್ವವನ್ನೂ ರಚನಾತ್ಮಕ ಕೆಲಸಗಾರರಿಗೆ ತಿಳಿಸುತ್ತಾ ಅವರು ಸ್ಪಷ್ಟವಾಗಿ ಎಚ್ಚರಿಕೆ ಕೊಟ್ಟಿದ್ದಾರೆ.

"ಈಗ ನಡೆಯುತ್ತಿರುವಂತೆ ಈ ಕೆಲಸ ಇದೇ ಗತಿಯಲ್ಲಿ ನಡೆದರೆ ಕೆಲಸ ಪೂರ್ಣವಾಗಲು ಐನೂರು ವರ್ಷಗಳಾಗುತ್ತವೆ. ಆದರೆ ಇದನ್ನು ಜಾಗ್ರತೆಯಾಗಿ ಪೂರ್ಣಗೊಳಿಸಬೇಕಾದರೆ ಕಾರ್ಯಕರ್ತರು ಈಗ ಈ ಕೆಲಸದಲ್ಲಿಟ್ಟಿರುವ ಭಕ್ತಿ, ಶಕ್ತಿ ಮತ್ತು ಪ್ರಯತ್ನವನ್ನು ನೂರರಷ್ಟು ಹೆಚ್ಚಿಸಿಕೊಳ್ಳಬೇಕು. ಇಂದು ಗಾಂಧೀಜಿ ತೋರಿಸಿದ ಎಲ್ಲ ರಚನಾತ್ಮಕ ಕೆಲಸಗಳೂ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದೊಡ್ಡ ಗಂಡಾಂತರದಲ್ಲಿವೆ. ಅಹಿಂಸಾ ಮಾರ್ಗದಲ್ಲಿಯೇ ಎಲ್ಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನಾವು ಪ್ರಯತ್ನಿಸಬೇಕು. ಆಗಮಾತ್ರ ಖಾದಿಯಉನ್ನತಿ, ಹರಿಜನಉನ್ನತಿ, ಎಲ್ಲ ವಿಧಾಯಕ ಕೆಲಸಗಳ ಉನ್ನತಿಯೂ ಆದೀತು. ಎಲ್ಲ ವಿಧಾಯಕ ಕಾರ್ಯಕರ್ತರೂ, ಎಲ್ಲ ಜನರೂ, ಈ ಕೆಲಸಕ್ಕೇ ತೊಡಗಬೇಕೆ? ಎಂದು ಕೆಲವರು ಕೇಳುತ್ತಾರೆ. ಆದರೆ ಸನ್ನೆಯಿಂದಲೇ ಒಬ್ಬ ತಿಳಿದುಕೊಳ್ಳುತ್ತಾನೆ, ಇನ್ನೊಬ್ಬ ತಿಳಿಸಿದರೆ ತಿಳಿದುಕೊಳ್ಳುತ್ತಾನೆ, ಮತ್ತೊಬ್ಬನಿಗೆ ತಿಳಿಸಿದರೂ ತಿಳಿದುಕೊಳ್ಳುವುದಿಲ್ಲ! ಖಾದಿ ಕೆಲಸವನ್ನು ನಡೆಸಬೇಕಾದರೂ ಆದರ ಹಿಂದೆ ಇಂದಿನ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗ, ಸಾಧನಇರಬೇಕು. ಆದ್ದರಿಂದ ನಾವು ಖಾದಿಕೆಲಸದಲ್ಲಿರಲಿ ಅಥವಾ ಗ್ರಾಮೋದ್ಯೋಗನಡೆಸುತ್ತಿರಲಿ, ಇನ್ನೂ ಮೂರು ನಾಲ್ಕು ವರ್ಷಗಳೊಳಗಾಗಿ ನಮ್ಮ ಭೂಮಿಸಮಸ್ಯೆಯನ್ನು ಮೊದಲು ಪರಿಹರಿಸಿಕೊಳ್ಳಬೇಕು. ಜಗತ್ತು ಬೇಸತ್ತಿದೆ. ಅಹಿಂಸಾ ಮಾರ್ಗದಲ್ಲಿ ನಾವು ಭೂಸಮಸ್ಯೆಯನ್ನು ಪರಿಹಾರ ಮಾಡಿಕೊಂಡರೆ ಇಡೀ ಜಗತ್ತಿಗೇ ನೇತೃತ್ವವನ್ನು ವಹಿಸಿದಂತಾದೀತು. ವಿಶ್ವ ಇಂದು ಅಪಾರವಾದ ಶಸ್ತ್ರನಿರ್ಮಾಣದ ದುಷ್ಚಕ್ರದಲ್ಲಿ ಸಿಲುಕಿದೆ. ಅಹಿಂಸೆಯಿಂದ ತನ್ನ ಸಮಸ್ಯೆಗಳು ಪರಿಹಾರವಾಗುತ್ತದೆಂದು ಜಗತ್ತಿಗೆ ನಂಬಿಕೆ ಇಲ್ಲ. ಆದ್ದರಿಂದ ನಮ್ಮ ಕಾರ್ಯಕರ್ತರೆಲ್ಲರೂ ಈಗ ಭೂದಾನಯಜ್ಞದ ಕಾರ್ಯದಲ್ಲಿ ತೊಡಗಬೇಕಾಗಿದೆ. ಆಗಮಾತ್ರ ನಾವು ಸರಿಯಾದ ಕರ್ತವ್ಯವನ್ನು ಮಾಡಿದಂತಾಗುತ್ತದೆ. ಅವರು ಈ ಕೆಲಸ ಮಾಡದಿದ್ದರೆ ತಪ್ಪು ಮಾಡಿದಂತಾದೀತು." ಏಕೆಂದರೆ "ಹಿಂದೂಸ್ತಾನದಿಂದ ಮಾರ್ಗದರ್ಶನ ಸಿಗಲೆಂದು ಇಡೀಪ್ರಪಂಚ ನಿರೀಕ್ಷಿಸುತ್ತಿದೆ. ಆದ್ದರಿಂದ ನೀವೆಲ್ಲರೂ ಎಲ್ಲಾ ಕಾರ್ಯಕ್ರಮಗಳನ್ನೂ ಬಿಟ್ಟು ಈ ಕೆಲಸವನ್ನೇ ಮಾಡಿದರೆ (ಭೂದಾನಯಜ್ಞ) ಗಾಂಧೀಜಿ ಬಯಸಿದ ಚಿತ್ರವನ್ನು ನೀವು ಪ್ರತ್ಯಕ್ಷವಾಗಿಯೇ ಪ್ರಕಟಪಡಿಸಬಲ್ಲರಿ, ನೋಡಬಲ್ಲಿರಿ. ಆದ್ದರಿಂದ ಇಂದು ಗಾಂಧೀಜಿಯವರ ವಿಚಾರಗಳನ್ನು ಒಪ್ಪುವವರು ತಮ್ಮ ಎಲ್ಲ ಶಕ್ತಿಯನ್ನೂ ಭೂದಾನಯಜ್ಞ ಕಾರ್ಯದಲ್ಲಿ ಕೇಂದ್ರೀಕರಿಸಿ ದುಡಿಯಬೇಕು." ಅಲ್ಲದೆ, "ಭೂಮಿಯ ಕ್ರಾಂತಿಕಾರೀಬೇಡಿಕೆಯ ಜೊತೆಯಲ್ಲಿ ಯಾವ ಕೆಲಸ ಇರುತ್ತದೋ ಅದು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಹಳೆಯದಾಗಿದ್ದರೂ ಹೊಸ ಅರ್ಥ ಪಡೆದು ಕ್ರಾಂತಿಕಾರಕರೂಪ ತಾಳುತ್ತದೆ" ಎಂಬ ಆಚಾರ್ಯಕೃಪಲಾನಿಯವರ ಅಮರವಾಕ್ಯಗಳನ್ನು ನಾವು ಖಂಡಿತ ನೆನಪಿನಲ್ಲಿಡಬೇಕು. ಮಹಾತ್ಮಾಗಾಂಧಿಯವರ ಎಲ್ಲ ಕೆಲಸಗಳೂ ಕ್ರಾಂತಿಯೊಡನೆ ಸೇರಿಕೊಂಡಿದ್ದವು. ಅಂತೆಯೇ ವಿನೋಬಾರು "ಈ ಕೆಲಸ ಒಳ್ಳೆಯದು. ಅಷ್ಟೇ ಅಲ್ಲ ; ಇದು ಎಲ್ಲದರ ತಳಹದಿ. ಇದು ಸಾಮಯಿಕ ಮಾತ್ರವಲ್ಲದೆ ಕ್ರಾಂತಿಕಾರಿಯಾದದ್ದು" ಎಂದು ತಿಳಿಸಿದಾರೆ.

ಆದರೆ ಪ್ರಪಂಚದಲ್ಲಿ ಅನೇಕ ಕ್ರಾಂತಿಗಳು ಆಗಿವೆ, ಆಗುತ್ತಿವೆ. ಅದೇ ರೀತಿಯಲ್ಲೇ ಭೂಸಮಸ್ಯೆ ಪರಿಹಾರವಾಗಬೇಕೆ? ಇದಕ್ಕೆ ವಿನೋಬಾಜಿಯವರು "ಇಲ್ಲ, ಈ ಎಲ್ಲ ಮಾರ್ಗಗಳಿಗೆ ಬದಲಾಗಿ ನಮ್ಮದು ಪ್ರೇಮ ಮಾರ್ಗ" ಎಂದು ತಿಳಿಸಿದಾರೆ.

ಭೂಮಿ ಪ್ರೇಮದ ಗುರುತು

ಈ ಪ್ರೇಮಮಾರ್ಗವೇ ಭೂಮಿಯ ಸ್ಥೂಲರೂಪವನ್ನು ತಾಳಿಬಂದಿದೆ. ಭೂಮಿ ಪ್ರೇಮದ ಗುರುತು, ಪ್ರತೀಕ ಮಾತ್ರ. ಅವರು ಸ್ಪಷ್ಟವಾಗಿಯೇ ಹೇಳಿದಾರೆ, "ನನಗೆ ಭೂಮಿಯ ಬಗ್ಗೆ ಯಾವ ಮಹತ್ವವೂ ಇಲ್ಲವೆಂದು ತಿಳಿಸ ಬಯಸುತ್ತೇನೆ. ಜನ ತಾವು ಜಮೀನಿನ ಮಾಲೀಕರೆಂದು ಹೇಳಿಕೊಳ್ಳುತ್ತಾರೆ. ಆದರೆ ಭೂಮಿ ಸ್ಥಿರವಾಗಿರುತ್ತದೆ, ಈ ಜನ ಸಾಯುತ್ತಾರೆ; ಸತ್ತನಂತರ ಮಣ್ಣಾಗಿ ಮಣ್ಣಿನಲ್ಲಿ ಸೇರುತ್ತಾರೆ. ಹೀಗಿದ್ದರೂ 'ನಾವು ಭೂಮಿಯ ಒಡೆಯರು' ಎಂದು ಕೊಳ್ಳುತ್ತಾರೆ! ಆದ್ದರಿಂದ ನೀವು ಭೂಮಿಯ ಮಾಲೀಕರೋ, ಅಥವಾ ಭೂಮಿಯೇ ನಿಮ್ಮ ಮಾಲೀಕಳೋ? ಈ ನೆಲದ ಬಗ್ಗೆ ನನಗೆ ಮೋಹವಿಲ್ಲ."

"ಆದರೆ ನಾವು ಭೂಮಿಯನ್ನು ಬೇಡುತ್ತಿರುವುದು ಪ್ರೇಮಭಾವ ಬೆಳೆಸುವುದಕ್ಕಾಗಿ. ದಾನ ಕೊಡುವವರು ಪ್ರೇಮದಿಂದ ದಾನ ನೀಡಿದರೆ ಮಾತ್ರ ಅದಕ್ಕೆ ಮಹತ್ವವಿದೆ."

ನಿಜವಾಗಿ ನೋಡಿದರೆ, ವಿನೋಬಾರು ಭೂದಾನಯಜ್ಞದ ಮೂಲಕ ಅಹಿಂಸಾಶಕ್ತಿಯ ಗುಟ್ಟನ್ನು ಪ್ರತ್ಯಕ್ಷವಾಗಿ ತೋರಿಸಬಯಸಿದಾರೆ. ಈ ಪ್ರಯೋಗದ ಬೆಲೆಯನ್ನು ತಿಳಿಸುತ್ತಾ ಅವರು ಹೀಗೆ ಹೇಳಿದಾರೆ:

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅಹಿಂಸೆಯ ಹೊಸಪ್ರಯೋಗ

"ಭೂದಾನಯಜ್ಞದಿಂದಾಗುವ ಮಿಕ್ಕೆಲ್ಲ ಲಾಭಗಳನ್ನು ಒಂದುಕಡೆ ಇಟ್ಟುಬಿಡಿ. ಅದಕ್ಕೆಲ್ಲಾ ಏನೂ ಬೆಲೆಯಿಲ್ಲ. ಇದರಿಂದ ಅಹಿಂಸಾಶಕ್ತಿ ಹೆಚ್ಚಾಗುತ್ತದೆ ಅದೇ ನಿಜವಾದ ದೊಡ್ಡ ಲಾಭ. ಕೆಲವಾರುಸಲ ಜನ 'ಅಹಿಂಸೆಯಿಂದೇನಾಗುತ್ತದೆ? ಹೇಗಾಗುತ್ತದೆ?' ಎಂದು ಹೇಳಿ ಎಲ್ಲಿಯವರೆಗೆ ಸಾಧ್ಯವೋ ಅಲ್ಲಿಯವರೆಗೆ ಅಹಿಂಸೆಯನ್ನು ಅನುಸರಿಸೋಣ, ಅಹಿಂಸೆಯಿಂದಾಗದಿದ್ದರೆ, ಏನು ಮಾಡೋಣ?' ಎಂದು ಕೇಳುತ್ತಾರೆ. 'ನೀವೇ ಹೇಳಿ ಏನುಮಾಡುತ್ತೀರಿ?' ಎಂದು ಕೇಳಿದರೆ 'ಹಿಂಸೆಯನ್ನು ಆರಾಧಿಸುತ್ತೇವೆ!' ಎನ್ನುತ್ತಾರೆ. ಇಂದಿಗೆ ಲಕ್ಷಾಂತರ ಸಲ ಯುದ್ಧಗಳನ್ನು ಮಾಡಿ ಆಗಿದೆ. ಆದರೆ ಅವುಗಳಿಂದ ಯಾವ ಸಮಸ್ಯೆಯೂ ಪರಿಹಾರವಾಗಿಲ್ಲ. ಆದರೂ ಜನ ಹಿಂಸೆಯನ್ನು ಪ್ರಭಾವೋತ್ಪಾದಕವೆಂದು ತಿಳಿದಿದಾರೆ."

"ಆದ್ದರಿಂದ ನಾವು ಮಾಡುತ್ತಿರುವ ಈ ಸಣ್ಣ ಕಾರ್ಯದಕಡೆ ಇಡೀ ವಿಶ್ವದದೃಷ್ಟಿ ಇದೆ. ಏಕೆಂದರೆ ಜಗತ್ತು ಹೋಗುತ್ತಿರುವ ಮಾರ್ಗಕ್ಕಿಂತ ಇದು ತೀರ ಭಿನ್ನವಾದದ್ದು. ಈ ಕೆಲಸ ಯಶಸ್ವಿಯಾಗದಿದ್ದರೆ ಜಗತ್ತಿಗೆ ಮತ್ತಷ್ಟು ತೊಂದರೆ ಉಂಟುಮಾಡುವಂಥದಲ್ಲ, ಯಶಸ್ವಿಯಾದರೆ, ಮಾರ್ಗ ತೋರದಿರುವ ಇಡೀ ಜಗತ್ತಿಗೇ ಬೆಳಕು, ಮಾರ್ಗ ಸಿಕ್ಕುತ್ತದೆ. ಆದ್ದರಿಂದ ಇದು ಬಹು ಮಹತ್ವವಾದದ್ದು. ಇದರಿಂದ ಒಂದು ದೊಡ್ಡ ಶಕ್ತಿಯ ಉಪಾಸನೆ ಆದೀತು. ಹೊಸದೃಷ್ಟಿ ಮೂಡೀತು, ಜಗತ್ತಿಗೆ ಸುಖದದಾರಿ ಸಿಕ್ಕೀತು." ಅಲ್ಲದೆ ವಿನೋಬಾರು ಈ ಕೆಲಸವನ್ನು ಪರಮಾತ್ಮನ ಪ್ರೇರಣೆಯೆಂದು ತಿಳಿದು ಅತ್ಯಂತ ವಿನಯದಿಂದ ಹೇಳಿದಾರೆ-"ಈ ಭೂದಾನಯಜ್ಞ, ಅಹಿಂಸೆಯ ಒಂದು ಪ್ರಯೋಗ, ಜೀವನಪರಿವರ್ತನೆಯ ಪ್ರಯೋಗ. ನಾನು ನಿಮಿತ್ತಮಾತ್ರ. ನೀವೂ ನಿಮಿತ್ತಮಾತ್ರರೇ. ಪರಮೇಶ್ವರನು ನನ್ನಿಂದ, ನಿಮ್ಮಿಂದ ಕೆಲಸ ಮಾಡಿಸಬಯಸಿದಾನೆ. ಇದು ಕಾಲಪುರುಷನ ಪರಮೇಶ್ವರನ ಪ್ರೇರಣೆ. ಆದ್ದರಿಂದ ನಾನು ಬೇಡುತ್ತಿದ್ದೇನೆ. ನೀವು ನೀಡಿರಿ, ಹೃದಯಬಿಚ್ಚಿ ಕೊಡಿರಿ. ಒಂದಡಿ ಜಾಗಕ್ಕೆ ಜಗಳವಾಡುವ ಜನ ನಾನು ಹೇಳಿದರೆ ನೂರಾರು, ಸಾವಿರಾರು ಎಕರೆ ಹೊಲವನ್ನು ಕೊಡಲು ಸಿದ್ಧರಾಗುತ್ತಾರೆ. ಅಂತೆಯೇ ಇದು ಪರಮೇಶ್ವರನ ಪ್ರೇರಣೆಯೆಂದು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ತಿಳಿಯಿರಿ. ಎಲ್ಲರೂ ಈ ಕೆಲಸದಲ್ಲಿ ಒಂದಾಗಿರಿ. ಇದಕ್ಕೆ ವಿರೋಧ ಮಾಡಬೇಡಿರಿ. ಇದರಿಂದ ಕಲ್ಯಾಣವೇ ಆಗುತ್ತದೆ."

ಸರ್ವೋದಯ ಸಿದ್ಧಿಗೆ ತಳಹದಿ ಭೂದಾನಯಜ್ಞ ಎಂಬುದನ್ನು ತಿಳಿಸುತ್ತಾ ದಾನ ಮತ್ತು ಯಜ್ಞದ ಅರ್ಥವನ್ನು ಸ್ಪಷ್ಟವಾಗಿ ತಿಳಿಸಿದಾರೆ.

ಉಪಕಾರವಲ್ಲ ಋಣ

"ಭೂದಾನಮಾಡುವುದರಲ್ಲಿ ಕೇವಲ ದಾನದಮಹತ್ವವಿಲ್ಲ; ಸಮನಾದ ಹಂಚಿಕೆಯ ಮಹತ್ವವಿದೆ. ದಾನವೆಂದರೇ ಸಮನಾದ ಹಂಚಿಕೆ. "ದಾನಂಸಂವಿಭಾಗಃ"; ನಾವು ದಾನದಶಬ್ದವನ್ನು ಈ ಅರ್ಥದಿಂದಲೇ ಬಳಸಬೇಕು. ಸಮಾಜವನ್ನು ಕುಟುಂಬದ ಒಂದು ಅಂಶವೆಂದು ಭಾವಿಸುವ ವಿಚಾರವನ್ನು ಜನರಿಗೆ ತಿಳಿಸಬೇಕು. ಸಮಾಜ ತನ್ನ ಕುಟುಂಬದ ಒಂದು ಅಂಗ ಎಂಬ ಭಾವನೆಯಿಂದ ದಾನಕೊಡುವ ಪ್ರೇರಣೆ ಜನರಿಗೆ ಆಗಬೇಕು. ಭೂಮಿಹೀನರ ಬಗ್ಗೆ ಉಪಕಾರ ಮಾಡುತ್ತೇನೆಂಬ ದೃಷ್ಟಿಯಿಂದ ದಾನ ಮಾಡಬಾರದು. ಭೂಮಿಹೀನರಿಗೆ ಭೂಮಿಯಮೇಲೆ ಅಧಿಕಾರ, ಹಕ್ಕು ಇದೆ ಎಂದು ತಿಳಿದು ದಾನಮಾಡಬೇಕು. ಒಳ್ಳೆಯ ಭಾವನೆಯನ್ನು ಆಚರಣೆಗೆ ತರುವ ಪ್ರಯೋಗದಿಂದ ಯಾರಿಗೂ ನಷ್ಟವಾಗುವುದಿಲ್ಲ." ನಮ್ಮ ವಿಚಾರಗಳನ್ನು ದೃಢತೆಯಿಂದ ಜಾರಿಗೆ ತಂದರೆ ನಾವು ಬಯಸುವ ಸರ್ವೋದಯ ನಿರ್ಮಾಣವಾಗುತ್ತದೆ. ಶಾಂತಿಮಯ ಕ್ರಾಂತಿ ಆಗುತ್ತದೆ."

ಭೂದಾನದ ಜೊತೆಗೆ 'ಯಜ್ಞ'ಶಬ್ದದ ಪ್ರಯೋಗವನ್ನು ಒಂದು ವಿಶೇಷ ಅರ್ಥದಲ್ಲೇ ಬಳಸುತ್ತಾರೆ. ಇದು ಕೇವಲ 'ಭೂದಾನವಲ್ಲ', "ಭೂದಾನಯಜ್ಞ." ನಾವು ಇದರ ಪೂರ್ಣ ಅರ್ಥ ತಿಳಿದುಕೊಂಡರೇನೆ ಅದರ ಉದ್ದೇಶ ಸಾರ್ಥಕವಾಗುತ್ತದೆ. ಅಂತೆಲೇ ಅವರು ನಿಷ್ಕಾಪೂರ್ವಕವಾಗಿ ತಿಳಿಸಿದಾರೆ:

"ಯಜ್ಞದಲ್ಲಿ ಭಾಗವಹಿಸುವುದು ಎಲ್ಲರ ಕರ್ತವ್ಯ. ಆದ್ದರಿಂದ ಇದಕ್ಕೆ 'ಯಜ್ಞ'ದ ಹೆಸರನ್ನು ಕೊಟ್ಟಿದ್ದೇನೆ. ಕೆಲವರಂತೂ ಭೂಮಿಯನ್ನು ಖರೀದಿಗೆ ಕೊಂಡು ದಾನಮಾಡಿದಾರೆ. ಆಲ್ಲದೆ ಇದರಲ್ಲಿ ಕೇವಲ ಶ್ರೀಮಂತರಿಂದ ಮಾತ್ರ ಭೂಮಿ ಸ್ವೀಕಾರಮಾಡುವುದಿಲ್ಲ, ಬಡವರಿಂದಲೂ ಭೂಮಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಪಡೆಯುತ್ತಿದ್ದೇನೆ. ಒಂದು ಎಕರೆಯವನಿಂದಲೂ ಒಂದು ಗುಂಟೆಯನ್ನು ತೆಗೆದುಕೊಂಡಿದೇನೆ. ಅವನು ಅರ್ಧ ಗುಂಟೆ ಭೂಮಿಕೊಟ್ಟಿದ್ದರೂ ನಾನು ತೆಗೆದುಕೊಳ್ಳುತ್ತಿದ್ದೆ. ಈ ಒಂದು ಗುಂಟೆ ಜಮೀನನ್ನು ನೀವೇನುಮಾಡುತ್ತೀರೆಂದು ಜನ ಕೇಳುತ್ತಾರೆ. "ಏನೂ ತೊಂದರೆಯಿಲ್ಲ. ಒಂದು ಗುಂಟೆ ನೆಲ ಕೊಟ್ಟವನನ್ನೇ ಧರ್ಮದರ್ಶಿಯಾಗಿ ನೇಮಿಸಿ ಆ ಭೂಮಿಯಿಂದ ಬರುವ ಬೆಳೆಯನ್ನು ಬಡವರಿಗೆ ವಿನಿಯೋಗಿಸು" ಎನ್ನುತ್ತೇನೆ. ಒಂದು ಎಕರೆ ಇರುವವನೂ ಒಂದು ಗುಂಟೆ ನೀಡುವ ಮನೋವೃತ್ತಿಯನ್ನು ಹೊಂದಬೇಕು. ಇದನ್ನೇ ನಾನು ವಿಚಾರಕ್ರಾಂತಿ ಎನ್ನುವುದು. ವಿಚಾರಕ್ರಾಂತಿ ಇರುವೆಡೆಯಲ್ಲಿ ಜೀವನದ ಪ್ರಗತಿಯೂ ಆಗುತ್ತದೆ. "ಅಪಿಪ್ರಾಜ್ಯಂ ರಾಜ್ಯಂ ತೃಣಮಿವಪರಿತ್ಯಜ್ಯಸಹಸಾ"–ಒಂದು ಹುಲ್ಲುಕಡ್ಡಿ ಎಂದು ಭಾವಿಸಿ ರಾಜ್ಯವನ್ನೇ ಪರಿತ್ಯಾಗಮಾಡುವ ತ್ಯಾಗಿಗಳೂ ಈ ನಾಡಿನಲ್ಲಿ ಇದಾರೆ. ಆದ್ದರಿಂದ ಇದೆಲ್ಲವನ್ನೂ ಮುಂದುವರಿಸಿಕೊಳ್ಳಬೇಕಾದರೆ ಸಹಸ್ರಾರು ಮಂದಿಯ ಪರ್ವಿಭಾಗ ಇದರಲ್ಲಿ ಬೇಕು. ದರಿದ್ರನಾರಾಯಣನಿಗಾಗಿ ಎಲ್ಲರಿಂದಲೂ ದಾನಸಿಕ್ಕಬೇಕು. ಇದೇ ಯಜ್ಞ. ಆದ್ದರಿಂದ ಒಂದಲ್ಲಿ ಒಂದು ರೀತಿಯಲ್ಲಿ ದಾನಕೊಡು ಎಂದು ಎಲ್ಲರನ್ನೂ ಬೇಡುತ್ತೇನೆ. ಹಿಂದೂಸ್ಥಾನದಲ್ಲಿ ಇದೊಂದು ದೊಡ್ಡ ಕ್ರಾಂತಿಯಾಗಲಿದೆ. ನನ್ನ ಕಣ್ಣಿಂದ ಆ ಅದ್ಭುತದೃಶ್ಯವನ್ನು ನೋಡುತ್ತಿದೇನೆ."

ದಾನ ಮತ್ತು ಯಜ್ಞರೂಪದಲ್ಲಿ ಅಹಿಂಸಕಕ್ರಾಂತಿಯ ಎಲ್ಲವನ್ನೂ ಸಂಗ್ರಹಿಸುವ ವಿಚಾರವನ್ನು ತಿಳಸುತ್ತಾ ಅವರು ಹೇಳಿದಾರೆ:

ಅಮೃತದಮಳಿಹನಿ

"ನಿಮ್ಮ ಈ ದಾನಮಾರ್ಗದಿಂದ ಪ್ರಪಂಚಕ್ಕೆ ಸ್ವಲ್ಪ ಒಳ್ಳೆಯದೇನೋ ಆಗುತ್ತದೆ. ಆದರೆ ಇದರಿಂದ ಯಾವಸಮಸ್ಯೆಯೂ ಪರಿಹಾರವಾಗುವುದಿಲ್ಲ. ರಾಜ್ಯತಂತ್ರ ಬದಲಾಗದೆ ಏನೂ ಆಗಲು ಎಂದು ಕೆಲವರು ಹೇಳುತ್ತಾರೆ."

'ಇದರಿಂದ ತೊಂದರೆ ಏನೂ ಇಲ್ಲವಷ್ಟೆ'? ಎನುತ್ತೇನೆ ನಾನು. ಇದಕ್ಕೆ ಜನ 'ಹೌದು ಏನೂ ತೊಂದರೆಯಾಗುವುದಿಲ್ಲ; ಸ್ವಲ್ಪ ಒಳ್ಳೆಯದೇನೋ ಆಗುತ್ತದೆ. ಆದರೆ ಇಷ್ಟರಿಂದ ಏನಾದೀತು' ಎನ್ನುತ್ತಾರೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

'ನೀವು ಹೇಳಿದಂತೆಯೂ ಆಗಬಲ್ಲುದು. ನೀವೆಲ್ಲರೂ ಇದರಲ್ಲಿ ಸಹಕರಿಸದಿದ್ದರೆ, ನಿಮ್ಮೆಲ್ಲರಿಗೂ ಈ ಕೆಲಸದಲ್ಲಿ ಪ್ರೇರಣೆ ಸಿಕ್ಕದಿದ್ದರೆ, ಐದು ಹತ್ತು ಎಕರೆನೆಲ ಬಡವರಿಗೆ ಸಿಕ್ಕುತ್ತದೆ, ಅಷ್ಟೆ, ಇದಕ್ಕಿಂತ ಹೆಚ್ಚಿಗೆ ಏನೂ ಆಗುವುದಿಲ್ಲ. ಇಷ್ಟಾದರೂ ಪುಣ್ಯಕಾರ್ಯವಾದರೂ ಇದನ್ನು ಲೆಕ್ಕಕ್ಕೆತೆಗೆದು ಕೊಳ್ಳುವಂತಿಲ್ಲ. ಆದರೆ ಹನಿಹನಿಯಾಗಿ ಮಳೆ ಎಲ್ಲಕಡೆಯೂ ಬಿದ್ದು ನದಿ ನಾಲೆಗಳು ತುಂಬಿ ಹರಿಯುವಂತೆ, ನೀವೆಲ್ಲರೂ ಈ ಕೆಲಸಕ್ಕೆ ತೊಡಗಿದರೆ ಇದು ಅದ್ಭುತ ಪರಿಣಾಮಗಳನ್ನು ಉಂಟುಮಾಡುತ್ತದೆ.

ಭೂದಾನ ಮಾನವತೆಯ ಪ್ರತಿಬಿಂಬ

ಕಾದ ಭೂಮಿಯಮೇಲೆ ಮಳೆಹನಿ ಬೀಳುವಂತೆ ಈ ಕೆಲಸದಿಂದ ಭೂಮಿಹೀನರಿಗೆತೃಪ್ತಿ ಉಂಟಾಗುತ್ತದೆ.ಹಸಿವು ಬಾಯಾರಿಕೆಯಿಂದ ಕೂಡಿದ ಭೂಮಿಹೀನರ ಕಿಚ್ಚು ಇದರಿಂದ ತಣ್ಣಗಾದೀತು. ಹೀಗಾಗದಿದ್ದರೆ ಆ ಕಿಚ್ಚು ತನ್ನ ಜೊತೆಯಲ್ಲಿ ಎಲ್ಲರನ್ನೂ ಒಯ್ದು ಸರ್ವನಾಶದ ಸ್ಫೋಟನೆಗೆ ಈಡು ಮಾಡೀತು. ಈ ಉರಿ ಶಾಂತವಾಗುತ್ತದಲ್ಲದೆ ಉಚಿತವಾದ ಮತ್ತು ವಿಧಾಯಕವಾದ ರೀತಿಯಲ್ಲಿ ಸಮಾಜದ ರಚನೆ ಪೂರ್ಣವಾಗಿ ಬದಲು ಮಾಡುವ ವಿಚಾರವೂ ಇದರಲ್ಲಿ ಅಡಗಿದೆ. ಜನ, 'ಇದೆಲ್ಲಾ ಏಕೆ ಮಾಡುತ್ತೀರಿ? ನಿಮ್ಮ ಉದ್ದೇಶವೇನು?' ಎಂದು ಕೇಳುತ್ತಾರೆ. ನಾನು ಪರಿವರ್ತನೆ ಬಯಸುತ್ತೇನೆ. ಮೊದಲು ಹೃದಯ ಪರಿವರ್ತನೆ, ನಂತರ ಜೀವನ ಪರಿವರ್ತನೆ, ಕೊನೆಗೆ ಸಮಾಜ ರಚನೆಯ ಪರಿವರ್ತನೆ ತರ ಬಯಸುತ್ತೇನೆ. ಈ ರೀತಿಯಲ್ಲಿ ಮೂರು ಬಗೆಯ ಪರಿವರ್ತನೆ, ಕ್ರಾಂತಿಯನ್ನು ನಾನು ಬಯಸುತ್ತೇನೆ." ಈ ಕ್ರಾಂತಿ ಇಡೀ ಜಗತ್ತಿಗೆ ಸಾಕಾದಷ್ಟು ತಿಳಿದಿಲ್ಲವಾದರೂ ವಿನೋಬಾರಿಗೆ ಸ್ಪಷ್ಟವಾಗಿ ಕಾಣುತ್ತಿದೆ. ತೆಲಂಗಾಣದಲ್ಲಿ ಮತ್ತು ಅವರಯಾತ್ರೆಯ ಇತರೆಡೆಗಳಲ್ಲಿ ಕಂಡು ಬಂದ ಮಾನವತೆಯ ದರ್ಶನ ಸಾಮಾನ್ಯವೇನು? ಭಾರತ ಭೂಮಿಯಲ್ಲಿ ಅದು ಇನ್ನೂ ಸುಪ್ತಾವಸ್ಥೆಯಲ್ಲಿದೆ. ನಿಜವಾಗಿಯೂ ಭೂದಾನ ಯಜ್ಞರೂಪದಲ್ಲಿ ಮಾನವತೆಯೇ ಆಕಾರತಾಳಿ ನಿಂತಿದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ದರಿದ್ರನಾರಾಯಣ, ಕುಟುಂಬದ ಒಬ್ಬ ಮಗ

ಭೂದಾನ ಯಜ್ಞದ ಪ್ರೇರಣೆ ವಿನೋಬಾರಿಗೆ ಇದ್ದಕ್ಕಿದ್ದಂತೆ ಹೊಳೆಯಿತು. ಅವರ ಭಾಷಣವನ್ನು ಕೇಳದಯೇ' ಅವರ ಲೇಖನವನ್ನು ಓದದಯೇ ಇದ್ದಲ್ಲಿಂದಲೇ ಸ್ವಪ್ರೇರಣೆಯಿಂದ ಅನೇಕರು ಭೂಮಿದಾನ ನೀಡಿದ್ದಾರೆ. ಒಂದಲ್ಲ ಹಲವಾರು ಸಲ ಈರೀತಿ ದಾನ ಬಂದಿದೆ. ಒಮ್ಮೆ ಒಬ್ಬ ವೃದ್ಧೆ ವಿನೋಬಾರನ್ನು ತನ್ನ ಏಕಮಾತ್ರ ಮಗನೆಂದು ತಿಳಿದು ತನ್ನ ಎಲ್ಲ ದಾನ ನೀಡಿದರೆ, ಮತ್ತೊಬ್ಬ ಲೋಕ ಕಲ್ಯಾಣದ ಹಿರಿಯ ಗುರಿಯನ್ನು ತಿಳಿದುಕೊಂಡು ಓಡೋಡಿ ಬಂದು ದಾನ ನೀಡುತ್ತಾನೆ. ಅನೇಕ ಸಲ ತಂತಿ ಟಪ್ಪಾಲಿನಿಂದಲೇ ದಾನ ಬರುತ್ತದೆ! ಅವರ ಭಾಷಣನಡೆವ ಸ್ಥಳದಲ್ಲೂ ಅನೇಕ ಸಲ ಹೆಚ್ಚಾಗಿ ದಾನ ಬರುವುದಿಲ್ಲ. ಅನೇಕ ಸಲ ಯಾರೋ ಎಲ್ಲಿಂದಲೋ ಅವರ ದರ್ಶನಕ್ಕೆಂದು ಬಂದ, ಪರಿಚಯವೇ ಇಲ್ಲದ ವ್ಯಕ್ತಿಗಳಿಂದಲೇ ಅವರಿಗೆ ಹೆಚ್ಚುಹೆಚ್ಚಾಗಿ ದಾನ ಬಂದಿರುವುದೂ ಉಂಟು. ಅನೇಕ ಕಡೆ ಸ್ವಲ್ಪ ಜಮೀನು ದೊರೆತರೆ ಅಥವಾ ಜಮೀನು ದೊರೆಯದೆ ಇದ್ದರೂ ಅವರ ಬಗ್ಗೆ ಎಳ್ಳಷ್ಟಾದರೂ ರೋಷವಿಲ್ಲ, ನಿರಾಸೆಯಂತೂ ಇಲ್ಲವೇ ಇಲ್ಲ. ಆದರೆ "ಇಂದಿಲ್ಲವಾದರೆ ಆತ ನಾಳೆಯಾದರೂ ಜಾಗೃತನಾಗುತ್ತಾನೆ, ಅವನ ಬಗ್ಗೆ ರೋಷ ಇಡಬೇಡಿ" ಎಂದು ಎಲ್ಲರಿಗೂ ಆಧೇಶ! ಕೊಡುವವನು ಬಲಾತ್ಕಾರದಿಂದಲೋ, ಒತ್ತಾಯದಿಂದಲೋ ಕೊಟ್ಟರೆ ಹಾಗೆ ನೀಡಬಾರದೆಂದು ಹಟ. ಆದರೆ "ದೇವರು ನನಗೆ ದಾನ ಬೇಡಲು ಪ್ರೇರಣೆ ಕೊಟ್ಟರುವಂತೆಯೇ, ಜನರಿಗೆ ನೀಡುವ ಪ್ರೇರಣೆಯನ್ನೂ ಕೊಟ್ಟ ದಾನೆಂಬ ಅಚಲ ನಂಬಿಕೆ. ಮಗುವಿಗೆ ಹಾಲು ಕುಡಿಸಲು ತಾಯಿಗೆ ಹಾಲು ಕೊಟ್ಟಲ್ಲವೇ ದೇವರು! ಅಂತೆಯೇ ಹಸಿವು ಕೊಟ್ಟು ಅನ್ನ ನೀಡಿಲ್ಲವೇ!" ಆದ್ದರಿಂದ ಅನೇಕಸಲ ವಾಮನಾವತಾರದ ಮೂರು ಹೆಜ್ಜೆಗಳಿಂದ ಸರ್ವಸ್ವವನ್ನೂ ದಾನ ತೆಗೆದುಕೊಂಡು ಅನೇಕ ಶ್ರೀಮಂತರನ್ನು ಬಡವರನ್ನಾಗಿ ಮಾಡಬಯಸಿದಾರೆ ವಿನೋಬಾ. ಅನೇಕ ಸಲ ಪ್ರತಿ ಕುಟುಂಬದಲ್ಲೂ ತಾನೊಬ್ಬ ಸೋದರ ಎಂದು ತಿಳಿಸಿ, ಸೋದರನ ಹಕ್ಕನ್ನು ಕೇಳುತ್ತಾರೆ. ಸದಾ ತಾವು ದರಿದ್ರನಾರಾಯಣನ, ದೀನ ದಲಿತರ ಪ್ರತಿನಿಧಿಯೆಂದು ಸಾರುತ್ತ ತಮ್ಮ ಪಾಲಿಗೆ ಸಲ್ಲಬೇಕಾದ ಹಕ್ಕನ್ನು ಕೇಳದೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಬಿಡುತ್ತಿಲ್ಲ. ಅವರು ಅಂಕಿ ಅಂಶ — ಲೆಕ್ಕಾಚಾರದ ಮಾತಿನಲ್ಲಿ ಹೇಳುತ್ತಾ :

"ದೇಶದಲ್ಲಿ ಉಳಿಮೆಯಾಗುತ್ತಿರುವ ನೆಲ ಒಟ್ಟು ಮೂವತ್ತು ಕೋಟಿ ಎಕರೆ ಇದೆ. ಸಾಧಾರಣವಾಗಿ ಒಂದು ಭಾರತೀಯ ಸಂಸಾರದಲ್ಲಿ ಐದು ಮಂದಿ ಇರುತ್ತಾರೆ. ನಾನು ಇದರಲ್ಲಿ ಆರನೇ ಒಂದು ಭಾಗದಷ್ಟು ನೆಲ ಅಂದರೆ ಐದು ಕೋಟಿ ಎಕರೆ ದಾನರೂಪದಲ್ಲಿ ಬರಬೇಕೆಂದು, ಬಡವರಿಗೆ ಹಂಚಿಕೆ ಆಗಬೇಕೆಂದು ಬೇಡುತ್ತೇನೆ. ಪ್ರತಿಮನೆಯ ಆರನೇಯವನು ದರಿದ್ರನಾರಾಯಣ, ದೀನನೂ ದಲಿತನೂ ಆದವನೆಂದು ತಿಳಿಯಬೇಕು. ಆದ್ದರಿಂದಲೇ ನಾನು ಭೂಮಿಯಿಲ್ಲದ ರೈತನಿಗಾಗಿ ಆರನೇ ಒಂದು ಭಾಗವನ್ನು ಬೇಡುತ್ತಿದೇನೆ." ಆದ್ದರಿಂದ "ನನ್ನನ್ನು ನಿಮ್ಮ ಕುಟುಂಬದ ಒಬ್ಬ ಸದಸ್ಯ ಎಂದು ತಿಳಿಯಿರಿ. ನನ್ನನ್ನು ನಿಮ್ಮ ಮನೆಯ ಒಬ್ಬ ಮಗ ಎಂದು ಭಾವಿಸಿರಿ. ಮಗನಿಗೆ ಸಲ್ಲಬೇಕಾದ ಹಕ್ಕನ್ನು ಕೊಡಿ." ಎನ್ನುತ್ತಾರೆ ಆಚಾರ್ಯ ವಿನೋಬಾ.

ಮುಖ್ಯಕಾರಣ: ವಾತಾವರಣ ಬದಲಾವಣೆ

ಹೀಗೆ ವಿನೋಬಾರು ಒಮ್ಮೆ ವಾಮನಾವತಾರದ ಮೂಲಕ, ಮತ್ತೊಮ್ಮೆ ಕುಟುಂಬದ ಐದನೆಯ ಅಥವಾ ಆರನೆಯ ಮಗನಂತೆ ಅಥವಾ ಇನ್ನೊಮ್ಮೆ ಮುಂದೆ ಬರಬಹುದಾದ ರಕ್ತರಂಜಿತ ಕ್ರಾಂತಿಯ ನಗ್ನ ಚಿತ್ರವನ್ನು ಹೇಳುವ ರೀತಿಯಲ್ಲಿ ವಿಚಾರಗಳನ್ನು ಸ್ಪಷ್ಟ ಮಾಡುತ್ತಾ ಹೊರಟಿದಾರೆ. ಭೂಮಾಲೀಕರಿಂದ ಪ್ರೇಮಪೂರ್ವಕವಾಗಿ ಭೂದಾನದ ಹಕ್ಕನ್ನು ತೆಗೆದುಕೊಳ್ಳುವುದರ ಮೂಲಕ ಸರ್ವೋದಯ ಸಮಾಜದ ನಿರ್ಮಾಣಕ್ಕೆ ವಾತಾವರಣವನ್ನುಂಟುಮಾಡುತ್ತಿದಾರೆ. ಅಹಿಂಸೆಯ ಮೂಲಕ ನಡೆಯುತ್ತಿರುವ ಈ ಕ್ರಾಂತಿ ತಾನೇ ತಾನಾಗಿ ಹೊಸ ಸಮಾಜದ ರೂಪವನ್ನು ತಾಳುತ್ತಿದೆ. ಹಿಂಸಾ ಕ್ರಾಂತಿಯ ಆವೇಗವಾಗಲಿ, ಪ್ರದರ್ಶನವಾಗಲೀ, ಉಪಯೋಗವಿಲ್ಲದ್ದು, ನಮಗೆ ಅನವಶ್ಯಕವಾದದ್ದು. ನಮಗೆ ಬೇಕಾಗಿರುವುದು ಕೆಲಸ ಎಷ್ಟು ಬೇಗ ಆಯಿತು ಎಂಬುದಲ್ಲ ; ಆದರೆ ಎಷ್ಟು ಆಳವಾಗಿ ಮನಸ್ಸಿನ ಮೇಲೆ ಶಾಶ್ವತವಾದ ವಿಕಾಸಕ್ಕೆ, ಶಾಂತಿಗೆ ಪರಿಣಾಮವನ್ನುಂಟು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮಾಡಿದೆ ಎಂಬುದು. ಹೃದಯ ಪರಿವರ್ತನೆ ಮತ್ತು ವಿಚಾರ ಕ್ರಾಂತಿಯ ತಳಹದಿಯ ಮೇಲೆ ನಡೆಯುವ ಕೆಲಸ ತಕ್ಷಣ ಎಲ್ಲ ಸುಖವನ್ನೂ, ಪ್ರತಿ ಫಲವನ್ನೂ ತಂದು ಕೊಡುವುದಿಲ್ಲ. ಆದರೂ ಈ ವಿಚಾರ ಕ್ರಾಂತಿ ಕೇವಲ ಭಾವರೂಪವಾದದ್ದಲ್ಲ. ಸ್ವಲ್ಪ ದಿನಗಳಲ್ಲೇ ಈ ಆಂದೋಲನವು ತನ್ನ ಪ್ರತ್ಯಕ್ಷ ಸ್ವರೂಪವನ್ನು ತೋರಿಸಿಕೊಟ್ಟಿದೆ. ಈಗಾಗಲೇ ತೆಲಂಗಾಣ ಮಧ್ಯಪ್ರದೇಶ, ವಿಂಧ್ಯಪ್ರದೇಶ, ರಾಜಾಸ್ಥಾನದ ಕೆಲವು ಭಾಗಗಳು ಮತ್ತು ಉತ್ತರ ಪ್ರದೇಶದಲ್ಲಿ ಅವರಿಗೆ ಸುಮಾರು ನಲವತ್ತು ಸಾವಿರ ಎಕರೆ ಭೂಮಿ ದೊರಕಿದೆ; (ತಾರೀಖು ೫-೧೨-೧೯೫೨ ರವರೆಗೆ ೪ ಲಕ್ಷ ೨೨ ಸಾವಿರ ಎಕರೆ ನೆಲ ದೊರಕಿದೆ) ಮುಂದೆಯೂ ದೊರಕುತ್ತದೆ-ಈಗ ದಿನಂ ಪ್ರತಿ ಮುನ್ನೂರು ಎಕರೆ ನೆಲ ಸಿಕ್ಕುತ್ತಿದೆ. (ಡಿಸೆಂಬರ್ ೫೨ ರಿಂದೀಚೆಗೆ ದಿನಂ ಪ್ರತಿ ಒಂದು ಸಾವಿರ ಎಕರೆಗಿಂತ ಹೆಚ್ಚಾಗಿ ಭೂಮಿ ದೊರಕುತ್ತಿದೆ.) ಅವರು ತಿಳಿಸಿರುವ ಐದು ಕೋಟಿ ಎಕರೆಯಲ್ಲಿ ಉತ್ತರಪ್ರದೇಶದವರು ಒಂದು ಕೋಟಿ ಎಕರೆಯನ್ನೂ, ಮಧ್ಯಪ್ರದೇಶದವರು ಒಂದು ಲಕ್ಷ ಎಕರೆಯನ್ನೂ, ಹೈದರಾಬಾದಿನವರು ಒಂದು ಲಕ್ಷ ಎಕರೆಯನ್ನೂ ವಿಂಧ್ಯಪ್ರದೇಶದ ಜನ ಮೂವತ್ತಾರು ಸಾವಿರ ಎಕರೆ ನೆಲವನ್ನು ಸಂಗ್ರಹಿಸುವ ಸಂಕಲ್ಪ ಮಾಡಿದಾರೆ. ಈ ಆಂದೋಳನದಲ್ಲಿ ಸ್ವತಃ ವಿನೋಬಾಜೀಯವರೇ "ಮಾಡೋಣ ಇಲ್ಲವೇ ಮಡಿಯೋಣ" ಎಂಬ ಸ್ಫೂರ್ತಿಯಿಂದ ಈ ಕೆಲಸದಲ್ಲಿ ತೊಡಗಿದಾರೆ.

ಈ ಆಂದೋಳನ ಇಡೀ ದೇಶದ್ದಾಗಿದೆ

ಅವರು ಈ ಭೂದಾನಯಜ್ಞ ಆಂದೋಳನವನ್ನು ತೀವ್ರ ಮಾತ್ರ ಮಾಡುತ್ತಿರಪೆ ಇಡೀ ದೇಶವೇ ಈ ಕೆಲಸ ಮಾಡಬೇಕು, ದೇಶದಲ್ಲಿರುವ ಎಲ್ಲರೂ ತಮ್ಮ ತಮ್ಮ ಹವಿರ್ಭಾಗವನ್ನು ನೀಡಬೇಕೆಂದು ತಿಳಿಸುತ್ತಿದ್ದಾರೆ. ವಿನೋಬಾರವರು ಸಂಚರಿಸುತ್ತಿರುವ ಪ್ರದೇಶದ ಜನಮಾತ್ರ ದಾನ ನೀಡಬೇಕೆಂದು ಅವರು ಕೇಳುತ್ತಿದ್ದಾರೆಂದು ಕೆಲವರ ಭಾವನೆ. ಆದರೆ ಇದು ತಪ್ಪು. ಅದಕ್ಕಾಗಿಯೇ ಅವರು "ನಾನು ಒಂದೊಂದು ಜಿಲ್ಲೆಯಲ್ಲಿ ಎರಡೋ ಮೂರೋ ಹಳ್ಳಿಗಳಲ್ಲಿ ಮಾತ್ರ ಸಂಚರಿಸಬಲ್ಲೆ. ನದಿಗಳೆಲ್ಲವೂ ಹರಿಯುತ್ತಾ ಬಂದು ಸಾಗರಕ್ಕೆ ಸೇರುವಂತೆ ಜಮೀನುಗಳೂ ಎಲ್ಲ ಕಡೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಯಿಂದಲೂ ಬಂದು ಈ ಭೂದಾನಯಜ್ಞ ಕ್ರಾಂತಿ ಸಾಗರದಲ್ಲಿ ಸೇರಬೇಕು. ಸಹಸ್ರಾರು ಕಾರ್ಯಕರ್ತರು ಕೆಲಸ ಮಾಡಿದರೆ ಮಾತ್ರ ಈ ಕೆಲಸ ಯಶಸ್ವಿಯಾಗುತ್ತದೆ," ಎಂದು ತಿಳಿಸಿದಾರೆ. ಅಂತೆಲೇ ಅವರು "ಸರ್ವೋದಯ ಸಮಾಜದ ಎಲ್ಲ ಸೇವಕರನ್ನೂ, ಪ್ರೇಮಿಗಳನ್ನೂ, ನಾಡಿನ ಹಿತೈಷಿಗಳನ್ನೂ "ಬನ್ನಿ, ಈ ಕೆಲಸದಲ್ಲಿ ತೊಡಗಿರಿ," ಎಂದು ಸ್ವಾಗತಿಸಿದಾರೆ. ಅವರು ಈಗ ಇಡೀ ದೇಶಕ್ಕೆ ಈ ಮುಖ್ಯವಾದ ಅಹಿಂಸಕ ಕ್ರಾಂತಿಯ ಕಾರ್ಯ ಕ್ರಮವನ್ನು ಕೊಟ್ಟಿದ್ದಾರೆ. ಕೇವಲ ವಿನೋಬಾರವರು ದೇಶದಲ್ಲೆಲ್ಲಾ ಸಂಚರಿಸಿದ ಮಾತ್ರಕ್ಕೇ ಈ ಕೆಲಸ ಪೂರ್ಣವಾಗಿ ಯಶಸ್ವಿಯಾಗಿ ಬಿಡುವು ದಿಲ್ಲ. ಆದರೆ ಈಗ ಕಾರ್ಯಕರ್ತರ, ದೇಶ ಭಕ್ತರ, ಸತ್ವ ಪರೀಕ್ಷೆಯೂ ಆಗಬೇಕಾಗಿದೆ. ಆದ್ದರಿಂದ ಕೇವಲ ಅವರು ಸಂಚರಿಸುತ್ತಿರುವ ಜಾಗಕ್ಕೆ ಮಾತ್ರ ಸಂಬಂಧಪಟ್ಟ ಕಾರ್ಯಕ್ರಮ ಇದು ಎಂಬ ಭಾವನೆಯನ್ನು ನಾವು ತಪ್ಪೆಂದು ತಿಳಿಯಬೇಕು! ಭಾರತದ ಪ್ರತಿಯೊಂದು ಪ್ರಾಂತದಿಂದಲೂ ಅವರು ಭೂಮಿಯನ್ನು ಕೇಳುತ್ತಿರುವಂತೆಯೇ ಪ್ರತಿ ವ್ಯಕ್ತಿಯೂ ತನ್ನ ಪಾಲಿನ ದಾನವನ್ನು ಕೊಡಬೇಕೆಂದು ಕೇಳಿದಾರೆ. ಅವರು ಕೇವಲ ಭೂಮಾಲೀಕರಿಂದ ಮಾತ್ರವೇ ಬೇಡುತ್ತಿಲ್ಲ. ಬಡವರು, ಹಣವಂತರು, ಭೂಮಿಯಿಲ್ಲದವರು ಇತ್ಯಾದಿ ಎಲ್ಲ ಜನಕ್ಕೂ ಒಂದು ಕಾರ್ಯಕ್ರಮವನ್ನು ತಿಳಿಸುತ್ತಾ ವಿನೋಬಾರವರು ಹೇಳಿದಾರೆ:—

ವ್ಯವಹಾರಿಕ ಕಾರ್ಯಕ್ರಮ ಎಲ್ಲಕ್ಕಿಂತ ಮೊದಲು ಬಡವರಿಂದ

"ಈ ಭೂದಾನಯಜ್ಞದಲ್ಲಿ ನನ್ನ ಮೊದಲ ಬೇಡಿಕೆ–ಬಡವರಲ್ಲಿ. ಇದು ಜನರಿಗೆ ಆಶ್ಚರ್ಯವಾಗಬಹುದು. ಆದರೆ ಪ್ರತಿಯೊಬ್ಬನ ಉದ್ಧಾರ ಅವನವನ ಆತ್ಮ ಬಲದಿಂದ ಮಾತ್ರ ಆಗುತ್ತದೆ. ಈ ಮಾತನ್ನು ತಿಳಿದರೆ ನನ್ನ ಬೇಡಿಕೆ ಯಿಂದ ಏನೂ ಆಶ್ಚರ್ಯ ತೋರುವುದಿಲ್ಲ. ಸ್ವಲ್ಪ ಭೂಮಿ ಇರುವವರೂ ಕೂಡ, ಸಣ್ಣ ಸಣ್ಣ ಬೇಸಾಯಗಾರರೂ ಸಹ ಈ ಆಂದೋಳನದ ಬಗ್ಗೆ ಇರುವ ಪ್ರೇಮದ ಗುರುತಾಗಿ ತಮ್ಮ ಭೂಮಿಯ ಒಂದು ಸಣ್ಣ ಪಾಲನ್ನಾದರೂ ದಾನ ಕೊಡಬೇಕೆಂದು ನನ್ನ ಅಪೇಕ್ಷೆ. ಇದೇ ರೀತಿ ಸಾಕಾದಷ್ಟು ನೆಲ ನನಗೆ ಸಾಧಾರಣ ಬೇಸಾಯಗಾರರಿಂದ ದೊರೆತಿದೆ.

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮತ್ತೆ ದೊಡ್ಡ ಭೂಮಾಲೀಕರನ್ನು ಕುರಿತು

"ಹೆಚ್ಚು ಹೆಚ್ಚಾಗಿ ಭೂಮಿ ಇರುವ ಭೂಮಾಲೀಕರು ಈ ಯಜ್ಞಕ್ಕೆ ಹೆಚ್ಚು ಹೆಚ್ಚಾಗಿ ತಮ್ಮ ಪಾಲನ್ನು ಕೊಡಬೇಕು. ಗಾಳಿ, ಬೆಳಕು ಮತ್ತು ನೀರು ಇವೆಲ್ಲವೂ ದೇವರು ಕೊಟ್ಟಿರುವ ಸಂಪತ್ತು. ಇವೆಲ್ಲವೂ ಎಲ್ಲರಿಗೂ ಸುಲಭವಾಗಿ ದೊರೆಯುತ್ತವೆ. ಹಾಗೆಯೇ ಭೂಮಿಯೂ ದೇವರು ನಿರ್ಮಾಣ ಮಾಡಿರುವ ಸಂಪತ್ತು. ಇದೂ ಕೂಡ ಎಲ್ಲರಿಗೂ ಸೇರಬೇಕು. ಎಲ್ಲರಿಗೂ ದೊರೆಯುವಂತಾಗಬೇಕು. ಭೂಮಿ ಎಲ್ಲರ ತಾಯಿ. ನಾವೆಲ್ಲರೂ ಭೂ-ಮಾತೆಯ ಪುತ್ರರು—"ಮಾತಾ ಭೂಮಿಃ ಪುತ್ರೋಹಂ ಪೃಥಿವ್ಯಾಃ"—ಎಂದು ನಮ್ಮ ವೇದಗಳು ಸಾರಿವೆ. ಭೂಮಿಯಿಲ್ಲದವರ ಹಕ್ಕನ್ನು ತಿಳಿದುಕೊಂಡು ಅವರನ್ನು ನಮ್ಮ ಕುಟುಂಬದ ಸೋದರರೆಂದು ತಿಳಿದು ತಮ್ಮ ಭೂಮಿಯ ಒಳ್ಳೆಯ ಭಾಗವನ್ನು ಭೂಮಿ ಇಲ್ಲದವರಿಗಾಗಿ ದಾನ ಮಾಡುವುದು ದೊಡ್ಡ ದೊಡ್ಡ ಭೂಮಾಲೀಕರ ಕರ್ತವ್ಯ. ಇದರಲ್ಲೇ ಅವರ ದೊಡ್ಡಸ್ತಿಕೆ, ಹಿರಿಮೆ ಇರುವುದು,"

ಜಮೀನುದಾರರು ಎರಡು ರೀತಿಯ ದಾನ ನೀಡಲಿ

ದೊಡ್ಡ ದೊಡ್ಡ ಭೂಮಾಲೀಕರಿಗೆ ತಿಳಿಸಿರುವ ಮಾತುಗಳು ಜೋಡೀದಾರರು, ಜಹಗೀರುದಾರರು, ಜಮೀನುದಾರರಿಗೂ ಅನ್ವಯಿಸುತ್ತದೆ. ಆದರೆ ಜೋಡೀದಾರರೂ, ಜಹಗೀರುದಾರರೂ, ಜಮೀನುದಾರರೂ "ನಾವೇನೋ ಈಗ ನಮ್ಮ ಜೋಡೀದಾರಿಕೆಯಿಂದ, ಜಹಗೀರುದಾರಿಕೆಯಿಂದ, ಜಮೀನ್ದಾರಿಯಿಂದ ಮುಕ್ತರಾಗುತ್ತಿದ್ದೇವೆ. ಈಗ ನಮ್ಮಿಂದ ಏನು ತಾನೆ ಅಪೇಕ್ಷಿಸುತ್ತೀರಿ?" ಎಂದು ಕೇಳುತ್ತಾರೆ. ಅದಕ್ಕೆ ವಿನೋಬಾರು, "ನಿಮ್ಮಿಂದ ನಾನು ಎರಡು ರೀತಿಯಲ್ಲಿ ದಾನ ಅಪೇಕ್ಷಿಸುತ್ತೇನೆ. ನಿಮ್ಮ ಸ್ವಂತ ಸಾಗುವಳಿಗಾಗಿ ಇಟ್ಟುಕೊಂಡಿರುವ ಭೂಮಿಯಲ್ಲಿ ಒಂದು ಪಾಲನ್ನು ದರಿದ್ರನಾರಾಯಣನಿಗಾಗಿ ಕೊಡಿರಿ. ಇಷ್ಟೇ ಅಲ್ಲದೆ ನಿಮಗೆ ಸರಕಾರದಿಂದ ನಿಮ್ಮ ಜೋಡೀಗ್ರಾಮದ ಬಾಬತು ಅಥವಾ ಜಮೀನ್ದಾರಿ, ಜಹಗೀರಿ ಬಾಬತು ನಿಮಗೆ ಸಲ್ಲುವ ಪರಿಹಾರದ್ರವ್ಯ (Compensation) ದ ಎಲ್ಲ ಭಾಗವನ್ನೂ ಅಥವಾ ಮುಖ್ಯ ಭಾಗವನ್ನಾದರೂ ಪ್ರೇಮಪೂರ್ವಕವಾಗಿ ಬಿಟ್ಟುಕೊಡಿ. ಇದಕ್ಕೆ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ನಾನು "ಸ್ವಾಮಿತ್ವ ವಿಸರ್ಜನೆ" ಎನ್ನುತ್ತೇನೆ. ನನ್ನ ಈ ಎಲ್ಲ ಪ್ರಯತ್ನಗಳೂ ನಮ್ಮ ಎಲ್ಲಾ ಸಮಸ್ಯೆಗಳನ್ನೂ ಪರಿಹಾರ ಮಾಡಿಕೊಳ್ಳುವುದಕ್ಕಾಗಿವೆ. ನಮ್ಮ ಸಂಸ್ಕೃತಿಗೆ ಅನುಕೂಲವಾಗಿದೆ. ಶಾಂತಿಮಯ ಮಾರ್ಗವಾಗಿದೆ. ಜಮೀನ್ದಾರರೂ, ಜೋಡಿದಾರರೂ, ಜಹಗೀರುದಾರರೂ ಆಗಿರುವ ಸೋದರರು ಈ ರೀತಿ ಎರಡು ಬಗೆಯ ದಾನ ನೀಡಿದರೆ ಈ ಶಾಂತಿಮಯ ಕ್ರಾಂತಿಯ ಗೆಲುವಿನಲ್ಲಿ ಯಶಸ್ಸು ಪಡೆದಂತಾಗುತ್ತದೆ," ಎಂದು ತಿಳಿಸಿದಾರೆ.

ಕೇವಲ ಹಣ ಇರುವವನು ಏನುಮಾಡಬೇಕು ?

ಭೂಮಿ ಇಲ್ಲದ ಕೇವಲ ಹಣ ಮಾತ್ರ ಹೊಂದಿರುವವರಿಗೆ ವಿನೋಬಾರವರು ಈ ರೀತಿ ಹೇಳಿದ್ದಾರೆ: ನಾನು ಹಣ ತೆಗೆದುಕೊಳ್ಳುವುದಿಲ್ಲ. ಆದರೆ ಹಣ ಇರುವವರು ಭೂಮಿಯನ್ನು ಖರೀದಿಗೆ ಕೊಂಡು ಜಮೀನು ದಾನ ಮಾಡಬೇಕು. ಭೂಮಿಹೀನರಿಗೆ ಭೂಮಿ ಹಂಚುವ ಪ್ರದೇಶದಲ್ಲಿ ಭಾವಿಗಳನ್ನು ತೋಡಿಸಿ ಕೊಡಬೇಕು. ಗಾಡಿಯನ್ನೋ ನೀರೆತ್ತುವ ರಾಟೆಯನ್ನೋ ಅಥವಾ ಎತ್ತುಗಳ ಜೋಡಿಯನ್ನೋ, ಕೊಂಡು ದಾನಮಾಡಬೇಕು."

ಭೂಮಿ ಮತ್ತು ಹಣ ಎರಡೂ ಇಲ್ಲದವರ ಕರ್ತವ್ಯ

"ಕೊನೆಯದಾಗಿ ಭೂಮಿಯೂ ಇಲ್ಲದೆ ಹಣವೂ ಇಲ್ಲದೆ ಕೇವಲ ಉತ್ಸಾಹ, ಶ್ರಮಶಕ್ತಿ ಮತ್ತು ದೇಶಪ್ರೇಮ ಇರುವವರನ್ನೇ ನಾನು ಭೂದಾನಯಜ್ಞದ ಸರ್ವಸ್ವ ಎಂದು ತಿಳಿದಿದ್ದೇನೆ. ಇಂತಹವರು ಗುಡಿಸಿಲು ಗುಡಿಸಲಿಗೂ, ಮನೆಮನೆಗೂ ಹೋಗಿ ಭೂದಾನಯಜ್ಞದ ಪ್ರಚಾರ ಮಾಡಬೇಕು. ಇದಕ್ಕೆ ಅವಶ್ಯಕವಾದ ವಾತಾವರಣವನ್ನು ಉಂಟುಮಾಡಬೇಕು. ಗುಂಪು ಗುಂಪಾಗಿ ಸೇರಿ ಭಾವಿ ತೋಡುವ ಕೆಲಸವನ್ನೋ ನೆಲವನ್ನು ಸಾಗುವಳಿಗೆ ತರುವ ಯಾವುದಾದರೂ ಕೆಲಸವನ್ನಾದರೂ ಮಾಡಬೇಕು. ಇದರಿಂದ ಭೂಮಿ ಹೀನರ ಕಲ್ಯಾಣಕ್ಕಾಗಿ ಭೂಮಿಹೀನರೂ ಬೇಕಾದಷ್ಟು ಕೆಲಸ ಮಾಡಿದಂತಾಗುತ್ತದೆ."

ಒಟ್ಟಿನಲ್ಲಿ ಪ್ರತಿಪ್ರಜೆಯಿಂದಲೂ ಒಂದಲ್ಲ ಒಂದು ರೀತಿಯ ಕರ್ತವ್ಯವನ್ನು ಭೂದಾನಯಜ್ಞವು ಆಶಿಸುತ್ತದೆ. ದರಿದ್ರನಾರಾಯಣನ ಪರವಾಗಿ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಆಚಾರ್ಯ ವಿನೋಬಾ ಹೇಳಿಯೇ ಇದಾರೆ:—"ಇದು ಭಾರತಮಾತೆಯ ಬೇಡಿಕೆ. ಇದರಿಂದ ಎಲ್ಲರ ಹೃದಯಗಳೂ ಶುದ್ಧಿಯಾಗುತ್ತದೆ. ಇದರಿಂದ ಇಡೀ ಭಾರತವು ಸರಿಯಾದ ಒಗ್ಗಟ್ಟನ್ನು ಸಾಧಿಸಲು ಸಹಾಯಕವಾಗುತ್ತದೆ."

ಪರಿಹಾರದ್ರವ್ಯ ಕೊಡದಿರುವ ಅಹಿಂಸಾ ಮಾರ್ಗ:

ಭೂ ಸಮಸ್ಯೆ ಸುಧಾರಣೆ ಆಗುತ್ತಿರುವಲ್ಲಿ ಈಗಿನ ಮುಖ್ಯ ಸಮಸ್ಯೆ ಭೂ ಮಾಲೀಕರಿಗೆ, ಜೋಡೀದಾರರುಗಳಿಗೆ, ಭಾರಿ ಭಾರಿ ಜಮೀನುದಾರರಿಗೆ ಪರಿಹಾರ ದ್ರವ್ಯ (Compensation) ಕೊಡಬೇಕೇ ಬೇಡವೇ ಎಂಬುದು. ಈ ವಿಚಾರದಲ್ಲೂ ಕೂಡ ಪೂಜ್ಯ ವಿನೋಬಾರವರು ತಮ್ಮ ಅಹಿಂಸಾ ರೀತಿಯ ದಾರಿಯನ್ನು ತೋರಿಸಿದಾರೆ. ಮೇಲೆಯೇ "ಸ್ವಾಮಿತ್ವ ವಿಸರ್ಜನೆ"ಯ ವಿಚಾರ ತಿಳಿಸಲಾಗಿದೆ. ಉತ್ತರ ಪ್ರದೇಶದಲ್ಲಿ ವಿನೋಬಾರವರು ಭೂದಾನಯಜ್ಞ ಯಾತ್ರೆ ಕೈಗೊಂಡ ಕಾಲದಲ್ಲಿ ಅಲ್ಲಿಯ ಅನೇಕ ಜೋಡೀದಾರರೂ, ಜಹಗೀರುದಾರರೂ, ಜಮೀನುದಾರರೂ ತಮ್ಮ ತಮ್ಮ ಪರಿಹಾರ ದ್ರವ್ಯದ (Compensation) ದಾನವನ್ನು ನೀಡಿದ್ದಾರೆ. ಭಾರತದ ರಾಜ್ಯಾಂಗ ಪರಿಹಾರ ದ್ರವ್ಯವನ್ನು ಕೊಡುವುದು ಅನಿವಾರ್ಯವೆಂದು ಒಪ್ಪಿದೆ, ಆದರೆ ನಮ್ಮ ಪ್ರಾಂತ ಸರ್ಕಾರಗಳಿಗೆ ಪರಿಹಾರ ದ್ರವ್ಯ ಕೊಡುವುದು ಸಾಧ್ಯವಾಗಲಾರದೆನಿಸಿದೆ. ಹೀಗಾಗಿ ಭೂಮಿ ಸಮಸ್ಯಾಪರಿಹಾರಕ್ಕೆ ಅವಶ್ಯಕವಾದ ಕಾನೂನುಗಳನ್ನು ಜಾರಿಗೆ ತರಲು ದೊಡ್ಡ ಅಡ್ಡಿಯುಂಟಾಗಿದೆ.

ಪರಿಹಾರ ದ್ರವ್ಯವನ್ನು ಕೊಡಬೇಕೇ ಅಥವಾ ಇಲ್ಲವೇ ಎಂಬ ವಿಚಾರದಲ್ಲೂ ಸಹ ಅವಶ್ಯಕವಾದ ಒಂದು ವಾತಾವರಣವನ್ನು ಭೂಮಿದಾನಯಜ್ಞವು ನಿರ್ಮಿಸುತ್ತದೆ ವಿನೋಬಾರವರು ಪರಿಹಾರದ್ರವ್ಯದ ವಿಚಾರವನ್ನೇ ಕಿತ್ತೊಗೆಯುತ್ತಾರೆ. ಆದರೆ ತಮ್ಮದೇ ಆದ ರೀತಿಯಲ್ಲಿ ಸ್ಪಷ್ಟಗೊಳಿಸಿದಾರೆ. ಅವರ ಅಭಿಪ್ರಾಯ ಹೀಗಿದೆ:- "ಈಗಿರುವ ಕಾನೂನಿನಂತೆ ಭಾರತ ರಾಜ್ಯಾಂಗದ ಪ್ರಕಾರ ಪರಿಹಾರದ್ರವ್ಯ ಕೊಟ್ಟು ಸರಕಾರ ಜಮೀನನ್ನು ವಶಪಡಿಸಿಕೊಳ್ಳಬಹುದು. ಆದರೆ ಅಹಿಂಸಾ ಮಾರ್ಗದಲ್ಲಿಯೇ ಯೋಚಿಸುವುದಾದರೆ ಪರಿಹಾರ ದ್ರವ್ಯ ಕೊಡಬೇಕಾದವರಿಗೆ ಕೊಡಲೇ

CC-0. Bhagavad Ramanuja National Research Institute, Melukote Collection,

Funding: Tattva Heritage Foundation,Kolkata. Digitization: eGangotri.

ಬೇಕೆಂಬುದೇನೂ ಇಲ್ಲ. ದೊಡ್ಡ ಜಮೀನುದಾರರು, ಜೋಡೀದಾರರು, ಮತ್ತು ಐಶ್ವರ್ಯವಂತರು ತಮ್ಮ ಜೀವನ ನಡೆಸುವಂತಾದರೆ ಆಯಿತು. ಅವರೂ ಬಡವರಂತೆಯೇ ನ್ಯಾಯವಾದ ರೀತಿಯಲ್ಲಿ ಜೀವನ ನಡೆಸುವಷ್ಟು ವ್ಯವಸ್ಥೆ ಮಾಡಿದರೆ ಸಾಕು. ಹತ್ತು ಸಾವಿರ ಎಕರೆ ಜಮೀನು ಇರುವ ಒಬ್ಬನಿಗೆ ಪರಿಹಾರ ದ್ರವ್ಯ ಕೊಡದೇ ಇದ್ದರೂ ಅವನಿಗೇನೂ ಹಿಂಸೆಮಾಡಿದಂತಾಗುವುದಿಲ್ಲ. ಆದ್ದರಿಂದ ದೊಡ್ಡ ಜಮೀನುದಾರರಿಗೂ, ಜೋಡೀದಾರರಿಗೂ ನೀವು ಸರಿಯಾಗಿ ಲೆಕ್ಕಾಚಾರ ಹಾಕಿ ಅದರಂತೆಯೇ ಪರಿಹಾರ ದ್ರವ್ಯ ಪಡೆಯಬೇಡಿರೆಂದು ನಾನು ತಿಳಿಸುತ್ತೇನೆ. ನಿಮ್ಮ ಜೀವನಕ್ಕೆ ಅವಶ್ಯಕತೆ ಇದ್ದಷ್ಟು ಮಾತ್ರ ತೆಗೆದುಕೊಳ್ಳಿರಿ. ಆದ್ದರಿಂದ ನಾನು ಪರಿಹಾರದ್ರವ್ಯದ ದಾನವನ್ನೂ ಕೇಳುತ್ತೇನೆ."

ಒಂದು ಕಡೆ ಅವರು ಮಾತನಾಡುತ್ತಾ ಈ ರೀತಿ ಹೇಳಿದಾರೆ: ಜಮೀನ್ದಾರರಿಗೆ ಎಷ್ಟು ಅವಶ್ಯಕವಿದೆಯೋ ಅಷ್ಟನ್ನು ಮಾತ್ರ ಅವರು ಸ್ವೀಕರಿಸಿ ಸಂತೋಷದಿಂದಿರಬೇಕೆಂದು ಜಮೀನ್ದಾರರಿಗೆ ತಿಳಿಸಬೇಕು. ಈ ವಿಚಾರವನ್ನು ಅವರು ಒಪ್ಪುವಂತೆ ಮಾಡಬಹುದು" ಇದಕ್ಕೆ ಒಬ್ಬ ಪತ್ರಿಕಾಕರ್ತ "ರಾಜ್ಯಾಂಗವನ್ನೇ ಏಕೆ ಬದಲಾಯಿಸಬಾರದು?" ಎಂದು ಕೇಳಿದ. ಅದಕ್ಕೆ ವಿನೋಬಾರು "ಅದಕ್ಕೆ ನಮಗೆ ಜಮೀನ್ದಾರರ ನೈತಿಕ ಸಮರ್ಥನೆ ಸಹ ದೊರೆಯಬೇಕು. ಯಾವ ಕಾನೂನನ್ನೂ ಜನರ ಮೇಲೆ ಹೊರಿಸಬಾರದು. ಅದರ ಜೊತೆಗೆ ಎಲ್ಲ ಪ್ರಜೆಗಳ ಮತ್ತು ಜಮೀನ್ದಾರರ ಸಹಾನುಭೂತಿಯೂ ಸಹ ಬೇಕು." ಎಂದು ತಿಳಿಸಿದಾರೆ. ಆಗ ಮತ್ತೊಬ್ಬ ಪತ್ರಿಕಾಕರ್ತ "ಸ್ವಾಮಿ, ಇಂದಿನ ಪದ್ಧತಿಗಳಲ್ಲೇ ನಂಬಿಕೆ ಇರುವವರು ತಮ್ಮ ಅಂತ್ಯವನ್ನು ತಾವೇ ಮಾಡಿಕೊಳ್ಳುತ್ತಾರೆಯೇ? ಭೂಮಿ ಕೊಟ್ಟಾರೆ?" ಎಂದು ಕೇಳಿದ್ದಕ್ಕೆ ವಿನೋಬಾಜೀಯವರು "ಈ ಯೋಚನೆಯನ್ನು ನಾನು ಒಪ್ಪುವುದಿಲ್ಲ ಭೂಮಿ ಇರುವವರು ಸ್ವಪ್ರೇರಣೆಯಿಂದ ಭೂಮಿ ಕೊಡದೆ ಭೂಸುಧಾರಣೆಗಳಿಗಾಗಿ ಆಗಬೇಕಾಗಿರುವ ಕಾನೂನು ನಿರ್ಮಾಣಕ್ಕೆ ಅವಶ್ಯಕವಾದ ವಾತಾವರಣವನ್ನು ಕಲ್ಪಿಸದೆ ಹೋದರೆ ಉಳಿದಿರುವ ಮಾರ್ಗ ಒಂದೇ—ಹಿಂಸಾ ಕ್ರಾಂತಿ. ನನ್ನ ಪ್ರಯತ್ನ ಇಂತಹ ಹಿಂಸಾ ಕ್ರಾಂತಿ ತಡೆಗಟ್ಟುವುದು. ನನಗೆ ಇದುವರೆಗೆ ದೊರೆತಿರುವ ಅನುಭವ, ಯಶಸ್ಸಿನ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಫಲವಾಗಿ ಅಹಿಂಸಕ ಕ್ರಾಂತಿಯಲ್ಲಿ ನಂಬಿಕೆ ಮತ್ತಷ್ಟು ದೃಢವಾಗಿದೆ." ಎಂದು ತಿಳಿಸಿದಾರೆ.

ಎಲ್ಲ ರೀತಿಯಲ್ಲೂ ವಾತಾವರಣ ಪರಿವರ್ತನೆ:

ಹೀಗೆ ಇಡೀ ದೇಶಕ್ಕೆ ಅಹಿಂಸಾತ್ಮಕ ಶಕ್ತಿಯಮಾರ್ಗ ತೋರಿಸುತ್ತಾ ಭೂಸಮಸ್ಯೆಯ ನಿವಾರಣೆಗಾಗಿ ವಾತಾವರಣ ನಿರ್ಮಾಣ ಮಾಡುತ್ತಿರುವ ಈ ಕಾರ್ಯಕ್ರಮ ಕೇವಲ ಆರ್ಥಿಕಮಾತ್ರವಲ್ಲದೆ ಸಮಾಜ ಜೀವನದ ಎಲ್ಲ ಅಂಗಗಳ ಮೂಲದಲ್ಲೂ ಪರಿವರ್ತನೆಯನ್ನು ಉಂಟುಮಾಡುತ್ತದೆ. ಇದೇ ಸಮಾಜದಲ್ಲಿ ಬುಡಸಹಿತ ಕ್ರಾಂತಿಯಾಗಲು ಸಹಾಯ ಮಾಡುತ್ತದೆ. ಈ ರೀತಿ ಜೀವನದ ದಿಕ್ಕನ್ನೇ ಬದಲಾಯಿಸುವ ದೃಢದೃಷ್ಟಿ ಇದರಲ್ಲಿದೆ.

ಭೂದಾನಯಜ್ಞದ ತತ್ವ ಮತ್ತು ಹಿನ್ನೆಲೆಯನ್ನು ಮಾತ್ರ ಈ ಮೊದಲನೆಯ ಭಾಗದಲ್ಲಿ ಕೊಡಲಾಗಿದೆ. ಎರಡನೆಯ ಭಾಗದಲ್ಲಿ ಕೆಲವು ಅನುಮಾನಗಳು ಮತ್ತು ಉತ್ತರಗಳನ್ನೂ ಮತ್ತು ಭೂವಿತರಣೆಯ ರೀತಿ ಇತ್ಯಾದಿ ಅಂಶಗಳನ್ನು ತಿಳಿದುಕೊಳ್ಳೋಣ.



ವಿಶ್ವವಾಣಿ ಮುದ್ರಣಾಲಯ, ೧೧ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೫೬೦

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಅದ
ಸಕ
ಬಾ
ನುಭ
ಪತ್ರಿ
ತಃ
ವ
ಒ
ಕ್ಕ
ಃ

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಭೂದಾನಯಜ್ಞ ಆಂದೋಲನದಲ್ಲಿ ಹೊಸ ಪರಂಪರೆ

ಋಷಿಗಳ ಬೀಡಾದ "ಹಿಮಾಚಲ ಪ್ರದೇಶ"ವು ಭೂದಾನಯಜ್ಞದಲ್ಲಿ ಹೊಸ ಪರಂಪರೆಗೆ ಜನ್ಮ ಕೊಟ್ಟಿದೆ. ಇದುವರೆಗೆ ವಿನೋಬಾರವರು ಪುತ್ರ ಅಥವಾ ಸೋದರ ಎಂದು ಹೇಳಿ, ದರಿದ್ರನಾರಾಯಣನ ಹಕ್ಕನ್ನು ಬೇಡುತ್ತಿದ್ದರು. ಆದರೆ ರೋಹಡೂ ಎಂಬಲ್ಲಿನ ಮಹಂತರಾದ ಶ್ರೀ ಉಘೋ ದಾಸ್‌ಜೀಯವರು ದರಿದ್ರನಾರಾಯಣನ ಪ್ರತಿನಿಧಿಯನ್ನು ತಮ್ಮ ತಂದೆ ಅಥವಾ ಗುರು ಎಂದು ತಿಳಿದು, ತಮ್ಮ ಸರ್ವಸ್ವವನ್ನೂ ಕೃಷ್ಣಾರ್ಪಣ ಮಾಡಿರುತ್ತಾರೆ. ಈ ರೀತಿ ದರಿದ್ರನಾರಾಯಣನು ತಂದೆಯ ಅಥವಾ ಗುರುವಿನ ರೂಪದಲ್ಲಿ ಈಗ ಪ್ರಕಟವಾಗಿದಾನೆ. ೧೯೫೨ ನೆಯ ಸೆಪ್ಟೆಂಬರ್ ೧೧ ರಂದು (ಪೂಜ್ಯ ವಿನೋಬಾರವರ ಜನ್ಮ ದಿವಸ-ಭೂಜಯಂತಿ) ಹಿಮಾಲಯದ ಈ ಇಪ್ಪತ್ತೈದು ವಯಸ್ಸಿನ ಮಹಂತರಿಗೆ ಅಂತಃ ಪ್ರೇರಣೆಯಾಯಿತು. ತಮ್ಮ ಐದು ಸಾವಿರ ಭಿಗಗಳಷ್ಟು ಜಹಗೀರಿಯನ್ನೂ, ಶ್ರೀ ರಘುನಾಥನ ಹೆಸರಿನಲ್ಲಿರುವ ಸುಮಾರು ಒಂದು ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳುವ ಕಟ್ಟಡ ಮತ್ತು ಆಸ್ತಿಯನ್ನೂ ವಿನೋಬಾಜಿಯವರಿಗೆ ಸಮರ್ಪಿಸಿರುತ್ತಾರೆ. ಇದರಲ್ಲಿ ಗ್ರಾಮದ ಸರ್ವಸ್ವವೂ ಯಜ್ಞದಲ್ಲಿ ದಾನವಾಗಿ ಬಂದಿದೆ. ರೋಹಡೂ ಎಂಬುದು ಮಹಾಸೂ ಜಿಲ್ಲೆಯ ತಾಲ್ಲೋಕು ಕೇಂದ್ರ. ಮಹಂತರಾದ ಶ್ರೀ ಉಘೋದಾಸರು ಈಗ ರೈತರಂತೆ ಭೂಮಿ ಸಾಗುವಳಿಗೆ ಸಂಬಂಧಿಸಿದ ಶ್ರಮದಿಂದ ಜೀವನ ನಡೆಸುತ್ತಾರೆ. ಸ್ವಾಮಿತ್ವ ನಿರಸನ, ವಿಚಾರ ಪರಿವರ್ತನೆ ಮತ್ತು ಜೀವನದ ಬೆಳವಣಿಗೆಗೆ ಇದೊಂದು ಸಾಟಿಯಿಲ್ಲದ ಉದಾಹರಣೆ.

ಎಲ್ಲಾ ಭೂಮಿಯೂ ಗೋಪಾಲನದು

CC-0. Bhagavad Ramanuja National Research Institute, Melukote Collection.

Funding: Tattva Heritage Foundation,Kolkata. Digitization: eGangotri.

ಮೈಸೂರಿನ ಮಹಾಜನತೆಗೆ

ಆಚಾರ್ಯ ವಿನೋಬಾರವರ ಸಂದೇಶ

"ಮೈಸೂರಿನ ಭೂದಾನಯಜ್ಞ ಯಾತ್ರೆಗಾಗಿ ಸಂದೇಶ ಕೇಳಿದ್ದೀರಿ. ಈ ಭೂದಾನಯಜ್ಞ ಕಾರ್ಯ ಪೂರ್ಣವಾಗುವವರೆಗೆ ನಾವು ವಿಶ್ರಾಂತಿ ತೆಗೆದು ಕೊಳ್ಳಬಾರದು. ಇದೇ ನನ್ನ ಸಂದೇಶ. ಹಿರಣ್ಯಗರ್ಭ ಮೈಸೂರು ಪ್ರದೇಶದಲ್ಲಿ ಈ ಕೆಲಸದ ಅತ್ಯವಶ್ಯಕತೆಯಿದೆ. ಅಲ್ಲಿಯ ಉದಾರ ಜನತೆಯ ಪರವಾಗಿ ಪೂರ್ಣ ಸಹಕಾರ ಸಿಕ್ಕುತ್ತದೆ. ಇದರಲ್ಲಿ ನನಗೇನೂ ಸಂದೇಹವಿಲ್ಲ. ಎಲ್ಲರೂ ತಮ್ಮ ತಮ್ಮ ಶಕ್ತಿ, ಧ್ಯಾನ ಮತ್ತು ಸಮಯದ ಮುಖ್ಯ ಭಾಗವನ್ನು ಈ ಕೆಲಸದಲ್ಲೇ ವಿನಿಯೋಗಮಾಡಲಿ. ಈ ಕಾರ್ಯ ಎಲ್ಲರಿಗೂ ಲಾಭದಾಯಕವಾದದ್ದು, ಕ್ರಾಂತಿಕಾರಕವಾದದ್ದು. ಇದು ಯುಗದ ಕೂಗು. ಅಹಿಂಸೆಯಶಕ್ತಿ ಇದರಿಂದ ಪ್ರಕಟವಾಗುತ್ತದೆ. ಈ ಕೆಲಸದಲ್ಲಿ ತನ್ನ ಪೂರ್ಣ ಸಹಯೋಗ ಕೊಡದವನು ತನ್ನ ಕರ್ತವ್ಯವನ್ನು ಕಳೆದುಕೊಂಡಾನು ಆ ಮೇಲೆ ಪಶ್ಚಾತ್ತಾಪಪಡಬೇಕಾದೀತೆಂದು ನನ್ನ ನಿಶ್ಚಯಪೂರ್ವಕ ನಂಬುಗೆ.

ನಾನು ಕರ್ನಾಟಕಕ್ಕೆ ಯಾವಾಗ ಬರಬಲ್ಲೆನೆಂಬುದನ್ನು ಹೇಳಲಾರೆ. ಬರುವ ಇಚ್ಛೆಯಂತೂ ಸದಾ ಇದೆ. ಆದರೆ ಈಗ ಬಿಹಾರದಲ್ಲಿ ಓಡಾಡುತ್ತಿದ್ದೇನೆ.

ಇಲ್ಲಿಯ ವೃತ್ತಾಂತ ನಿಮಗೆ ತಿಳಿಯುತ್ತಲೇ ಇರುತ್ತದೆ. ಅದರಿಂದ ಸ್ಫೂರ್ತಿ ಹೊಂದಿ ನೀವು ಈ ಕೆಲಸದಲ್ಲಿ ಗುಂಪು ಗುಂಪಾಗಿ ಸೇರಿ ಎಲ್ಲರೂ ಕೆಲಸಮಾಡಿರಿ. ಜಯಶ್ರೀ ನಿಮಗೆ ಒಲಿಯುವಳು-ನೀವೇ ನೋಡುತ್ತೀರಿ.

ಯಾರ ಹೃದಯಕ್ಕೂ ದುಃಖವನ್ನುಂಟುಮಾಡಬಾರದು, ಎಲ್ಲರನ್ನೂ ಗೌರವಿಸಬೇಕು, ಎಲ್ಲರ ಮರ್ಯಾದೆಯನ್ನೂ ವರ್ಧಿಸಬೇಕು, ಎಲ್ಲರನ್ನೂ ನಾರಾಯಣ ಸ್ವರೂಪವೆಂದು ಕಾಣಬೇಕು-ಇಷ್ಟು ನಿಮ್ಮೆಲ್ಲರ ನೆನಪಿನಲ್ಲಿ ಸದಾ ಇರಲಿ.

ಬಡಹರಿಯಾ ಮೊಕ್ಕಾಂ
ಬಿಹಾರ ಪ್ರಾಂತ
ತಾ॥ ೧೨-೧೦-೧೯೫೨

—ವಿನೋಬಾನ ಶುಭೇಚ್ಛೆ

ವಿಶ್ವವಾಣಿ ಮುದ್ರಣಾಲಯ, ೧೨ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೨.

CC-0. Bhagavad Ramanuja National Research Institute, Melukote Collection.